3 Order XXI Rule 72 of Code of Civil Procedure, 1908 relates to the following subject:
A) Staying the Court sale.
B) Permitting the decree holder to bid or buy property in Court sale.
C) Bid of co-sharer to have preference.
D) set-aside the Court sale on the ground of fraud.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 21 ನಿಯಮ 72 ಈ ಕೆಳಗಿನ ವಿಷಯಕ್ಕೆ ಸಂಬಂಧಿಸಿದ್ದು:
ಎ) ನ್ಯಾಯಾಲಯದ ಮಾರಾಟವನ್ನು ತಡೆಯುವುದು.
ಬಿ) ಡಿಕ್ರಿದಾರನಿಗೆ ನ್ಯಾಯಾಲಯದ ಮಾರಾಟದಲ್ಲಿ ಸ್ವತ್ತಿಗಾಗಿ ಸವಾಲು ಕೂಗಲು ಮತ್ತು ಖರೀದಿಸಲು ಪರವಾನಿಗೆ ಕೊಡುವುದು.
ಸಿ) ಸಹ ಹಿಸ್ಸೆದಾರನ ಸವಾಲಿಗೆ ಆದ್ಯತೆ ಕೊಡುವುದು.
ಡಿ) ಮೋಸದ ಕಾರಣ ನ್ಯಾಯಾಲಯದಲ್ಲಿ ಆದ ಮಾರಾಟವನ್ನು ರದ್ದುಗೊಳಿಸುವುದು.

4 Which one of the following is incorrect combination regarding defination of offences as per the Indian Penal Code?
A) Sec.320- Grievous hurt.
B) Sec.340– Wrongful restraint.
C) Sec.350- Criminal Force.
D) Sec.351- Assault.

ಭಾರತೀಯ ದಂಡ ಸಂಹಿತೆಯ ಪ್ರಕಾರ ಅಪರಾಧಗಳ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಪೈಕಿ ಯಾವುದೊಂದು ಸರಿಯಾದ ಹೊಂದಾಣಿಕೆಯಾಗಿರುವುದಿಲ್ಲ?
ಎ) ಕಲಂ 320 – ತೀವ್ರಗಾಯ
ಬಿ) ಕಲಂ 340 – ಅಕ್ರಮ ಪ್ರತಿಬಂಧ
ಸಿ) ಕಲಂ 350 – ಅಪರಾಧಿಕ ಬಲಪ್ರಯೋಗ
ಡಿ) ಕಲಂ 351 – ಹಲ್ಲೆ

5 “Once a mortgage, always a mortgage” means:
A) Mortgagee has no right to assign the mortgage debt to any other person.
B) Mortgage can not be redeemed after the expiry of fixed period.
C) Mortgage is always redeemable.
D) Mortgager has no right to assign right of redemption to any person.

"ಒಮ್ಮೆ ಮಾಡಿದ ಅಡಮಾನ, ಯಾವಾಗಲೂ ಅಡಮಾನವಾಗಿರುತ್ತದೆ" ಎಂದರೆ:
ಎ) ಅಡಮಾನ ಪಡೆದವರಿಗೆ ಅಡಮಾನದ ಸಾಲವನ್ನು ಬೇರೆ ಯಾವುದೇ ವ್ಯಕ್ತಿಗೆ ನಿಯೋಜನೆ ಮಾಡಲು ಹಕ್ಕು ಇರುವುದಿಲ್ಲ
ಬಿ) ಅಡಮಾನವನ್ನು ನಿಗಧಿತ ಅವಧಿ ಮುಗಿದ ಬಳಿಕ ವಿಮೋಚನೆ ಮಾಡಲಾಗುವುದಿಲ್ಲ.
ಸಿ) ಅಡಮಾನವನ್ನು ಯಾವ ಕಾಲದಲ್ಲು ವಿಮೋಚನೆ ಮಾಡಬಹುದು.
ಡಿ) ಅಡಮಾನಕಾರರಿಗೆ ವಿಮೋಚನೆ ಮಾಡುವ ಹಕ್ಕನ್ನು ಬೇರೆ ಯಾವುದೇ ವ್ಯಕ್ತಿಗೆ ನಿಯೋಜನೆ ಮಾಡಲು ಹಕ್ಕು ಇರುವುದಿಲ್ಲ.

6 What does "ab initio" refer to?
A) Towards the end.
B) From the beginning.
C) Initial Burden.
D) None of the above.

"ಅಬ್ ಇನಿಷಿಯೊ" ಎನನ್ನು ಉಲ್ಲೇಖಿಸುತ್ತದೆ?
ಎ) ಕೊನೆಯಲ್ಲಿ
ಬಿ) ಪ್ರಾರಂಭದಿಂದಲೂ
ಸಿ) ಆರಂಭಿಕ ಹೊಣೆಗಾರಿಕೆ
ಡಿ) ಮೇಲಿನ ಯಾವುದೂ ಅಲ್ಲ

7 “Registration of First Information Report is mandatory under Section 154 of the Code of Criminal Procedure, if the Information discloses commission of a cognizable offence and no preliminary enquiry is permissible in such a situation.” This guideline was issued by the Constitution Bench of the Hon'ble Supreme Court in the following decision:
A) Smt. Selvi vs State of Karnataka.
B) D.K.Basu vs State of West Bengal.
C) Arnesh Kumar vs State of Bihar.
D) Lalita Kumari vs Governement of Uttar Pradesh

"ಒಂದು ವರದಿಯು ಸಂಜ್ಞೆಯ ಅಪರಾಧವಾಗಿದೆ ಎಂದು ಬಹಿರಂಗ ಪಡಿಸಿದಲ್ಲಿ ಅಪರಾಧ ಪ್ರಕ್ರಿಯಾ ಸಂಹಿತೆ 1973ರ ಕಲಂ 154ರ ಅಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡುವುದು ಕಡ್ಡಾಯವಾಗಿದ್ದು ಆ ಸಂದರ್ಭದಲ್ಲಿ ಪ್ರಾಥಮಿಕ ವಿಚಾರಣೆಯ ಅವಶ್ಯಕತೆ ಇರುವುದಿಲ್ಲ" ಈ ಮಾರ್ಗಸೂಚಿಯನ್ನು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠ ಈ ಕೆಳಗಿನ ಪ್ರಕರಣದಲ್ಲಿ ಹೊರಡಿಸಿದೆ.
ಎ) ಶ್ರೀಮತಿ ಸೆಲ್ವಿ ವಿರುದ್ಧ ಕರ್ನಾಟಕ ರಾಜ್ಯ.
ಬಿ) ಡಿ.ಕೆ.ಬಸು ವಿರುದ್ಧ ಪಶ್ಚಿಮ ಬಂಗಾಳ ರಾಜ್ಯ.
ಸಿ) ಅರ್ನೆಶ್ ಕುಮಾರ್ ವಿರುದ್ಧ ಬಿಹಾರ ಸರ್ಕಾರ
ಡಿ) ಲಲಿತ ಕುಮಾರಿ ವಿರುದ್ಧ ಉತ್ತರ ಪ್ರದೇಶ ಸರ್ಕಾರ.

8 Which provision of the Code of Civil Procedure, 1908 relates to permitting the plaintiff to withdraw the suit with a liberty to file fresh suit in respect of same subject matter?
A) Order 23 Rule 1(3) of the Code of Civil Procedure, 1908
B) Order 23 Rule 2 of the Code of Civil Procedure, 1908
C) Order 23 Rule 3 of the Code of Civil Procedure, 1908
D) Order 23 Rule 3A of the Code of Civil Procedure, 1908

ದಿವಾಣಿ ಪ್ರಕ್ರಿಯಾ ಸಂಹಿತೆಯ ಯಾವ ನಿಬಂಧನೆಯು ವಾದಿಗೆ ದಾವಾವನ್ನು ಹಿಂತೆಗೆದುಕೊಂಡು ಅದೇ ವಸ್ತುವಿಷಯದ ಮೇಲೆ ಹೊಸ ದಾವೆಯನ್ನು ಹೂಡಲು ಅವಕಾಶವನ್ನು ನೀಡುವುದಕ್ಕೆ ಸಂಬಂಧಿಸಿದ್ದಾಗಿದೆ?

ಎ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 23 ನಿಯಮ 1(3)
ಬಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 23 ನಿಯಮ 2

ಸಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 23 ನಿಯಮ 3
ಡಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 23 ನಿಯಮ 3ಎ

9 If the requisite court fee is not paid on the plaint, inspite of an order by the Court, __________
A) plaint shall be returned to the plaintiff.
B) plaint shall be rejected.
C) suit shall be dismissed.
D) plaintiff shall be permitted to withdraw the suit.

ನ್ಯಾಯಾಲಯದ ಆದೇಶದ ಹೊರತಾಗಿಯು ವಾದಪತ್ರಕ್ಕೆ ನಿಗದಿಪಡಿಸಿದ ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡದೇ ಇದ್ದಾಗ __________
ಎ) ವಾದಪತ್ರವನ್ನು ವಾದಿಗೆ ವಾಪಸ್ಸು ಕೊಡತಕ್ಕದ್ದು
ಬಿ) ವಾದಪತ್ರವನ್ನು ತಿರಸ್ಕರಿಸತಕ್ಕದ್ದು
ಸಿ) ದಾವೆಯನ್ನು ವಜಾ ಮಾಡತಕ್ಕದ್ದು
ಡಿ) ವಾದಿಗೆ ದಾವಾವನ್ನು ವಾಪಸ್ಸು ಪಡೆಯಲು ಪರವಾನಿಗೆ ನೀಡತಕ್ಕದ್ದು

10 Who is the present Chairperson of Rajya Sabha?
A) Smt. Nazma Hepthullah.
B) Sri Om Birla.
C) Sri Venkaiah Naidu.
D) None of the above.

ರಾಜ್ಯಸಭೆಯ ಈಗಿನ ಸಭಾಪತಿ ಯಾರು?
ಎ) ಶ್ರೀಮತಿ ನಜ್ಮಾ ಹೆಫ್ತುಲ್ಲಾ.
ಬಿ) ಶ್ರೀ ಓಂ ಬಿರ್ಲ.
ಸಿ) ಶ್ರೀ ವೆಂಕಯ್ಯ ನಾಯ್ಡು.
ಡಿ) ಮೇಲಿನವರು ಯಾರು ಅಲ್ಲ

11 How many States and Union Territories are there in India at present?
A) 28 States and 9 Union Territories.
B) 28 States and 8 Union Territories.
C) 29 States and 7 Union Territories.
D) 29 States and 9 Union Territories.

ಭಾರತದಲ್ಲಿ ಈಗ ಎಷ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಇವೆ?
ಎ) 28 ರಾಜ್ಯಗಳು ಮತ್ತು 9 ಕೇಂದ್ರಾಡಳಿತ ಪ್ರದೇಶಗಳು
ಬಿ) 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳು
ಸಿ) 29 ರಾಜ್ಯಗಳು ಮತ್ತು 7 ಕೇಂದ್ರಾಡಳಿತ ಪ್ರದೇಶಗಳು
ಡಿ) 29 ರಾಜ್ಯಗಳು ಮತ್ತು 9 ಕೇಂದ್ರಾಡಳಿತ ಪ್ರದೇಶಗಳು

12 "To the best of my memory" is the autobiography of:
A) Justice V R Krishna Iyer
B) Justice P B Gajendragadkar

C) Justice P N Bhagawathi
D) Justice J S Verma

"ಟು ದಿ ಬೆಸ್ಟ್ ಆಫ್ ಮೈ ಮೆಮೋರಿ" __________ ರವರ ಆತ್ಮಚರಿತ್ರೆ:
ಎ) ನ್ಯಾಯಮೂರ್ತಿ ವಿ ಆರ್ ಕೃಷ್ಣ ಅಯ್ಯರ್
ಬಿ) ನ್ಯಾಯಮೂರ್ತಿ ಪಿ ಬಿ ಗಜೇಂದ್ರಗಡ್ಕರ್
ಸಿ) ನ್ಯಾಯಮೂರ್ತಿ ಪಿ ಎನ್ ಭಗವತಿ
ಡಿ) ನ್ಯಾಯಮೂರ್ತಿ ಜೆ ಎಸ್ ವರ್ಮ

13 The expression "died intestate" means:
A) died by making a Will
B) died without legal heirs.
C) died without any property
D) died without making a Will

"ಡೈಡ್ ಇಂಟಸ್ಟೇಟ್" ಎನ್ನುವ ಪದದ ಅರ್ಥ:
ಎ) ಉಯಿಲುನಾಮೆ ಬರೆದು ಮೃತಪಟ್ಟಿದ್ದು
ಬಿ) ಕಾನೂನುಬದ್ಧ ವಾರಸುದಾರರಿಲ್ಲದೆ ಮೃತಪಟ್ಟಿದ್ದು
ಸಿ) ಯಾವುದೇ ಆಸ್ತಿ ಇಲ್ಲದೆ ಮೃತಪಟ್ಟಿದ್ದು
ಡಿ) ಉಯಿಲುನಾಮೆ ಬರೆಯದೆ ಮೃತಪಟ್ಟಿದ್ದು

14 For hearing which case, largest-ever bench was constituted at the Supreme Court of India?
A) Golaknath case.
B) Aadhar case.
C) Keshavananda Bharati case.
D) None of the Above.

ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಯಾವ ಪ್ರಕರಣದ ವಿಚಾರಣೆಗಾಗಿ ಈವರೆಗಿನ ಅತಿ ದೊಡ್ಡ ಪೀಠವನ್ನು ರಚಿಸಲಾಗಿತ್ತು?
ಎ) ಗೋಲಕ್‌ನಾಥ್ ಪ್ರಕರಣ
ಬಿ) ಆಧಾರ್ ಪ್ರಕರಣ
ಸಿ) ಕೇಶವಾನಂದ ಭಾರತಿ ಪ್ರಕರಣ
ಡಿ) ಮೇಲಿನ ಯಾವುದೂ ಅಲ್ಲ

15 If the prosecution withdraws the prosecution against the accused in case where a charge has already been framed, __________
A) accused shall be discharged.
B) accused shall be acquitted.
C) further proceedings shall be stopped.
D) any one of the above.

ಒಂದು ಪ್ರಕರಣದಲ್ಲಿ ಆರೋಪವು ರಚಿತವಾದ ನಂತರ ಅಭಿಯೋಜನೆಯು ಆರೋಪಿಯ ವಿರುದ್ಧ ಅಭಿಯೋಜನೆಯನ್ನು ಹಿಂತೆಗೆದುಕೊಂಡರೆ, __________
ಎ) ಆರೋಪಿಯನ್ನು ವಿಮೋಚಿಸತಕ್ಕದ್ದು.
ಬಿ) ಆರೋಪಿಯನ್ನು ನಿರಪರಾಧಿಯೆಂದು ನಿರ್ಣಯಿಸತಕ್ಕದ್ದು.

ಸಿ) ಪ್ರಕರಣದ ಮುಂದಿನ ವಿಚಾರಣೆಯನ್ನು ಮುಕ್ತಾಯಗೊಳಿಸತಕ್ಕದ್ದು.
ಡಿ) ಮೇಲಿನ ಯಾವುದಾದರೊಂದು.

16 Which Section of the Code of Criminal Procedure, 1973 empowers a police officer to release an accused, who has been arrested with an allegation of committing non-bailable offence?
A) Sec.437(1).
B) Sec.437(2)
C) Sec.437(3)
D) Not empowered.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಯಾವ ಕಲಂ ಜಾಮೀನಿಯವಲ್ಲದ ಅಪರಾಧವನ್ನು ಮಾಡಿರುವ ಆರೋಪದಿಂದ ಬಂಧಿತರಾಗಿರುವ ಆರೋಪಿಯನ್ನು ಪೋಲೀಸ್ ಅಧಿಕಾರಿಯೇ ಬಿಡುಗಡೆ ಮಾಡುವ ಅಧಿಕಾರವನ್ನು ಕೊಡುತ್ತದೆ?
ಎ) ಕಲಂ 437(1)
ಬಿ) ಕಲಂ 437(2)
ಸಿ) ಕಲಂ 437(3)
ಡಿ) ಅಧಿಕಾರವಿರುವುದಿಲ್ಲ

17 Which one of the following is incorrect combination as per the Code of Criminal Procedure, 1973?
A) Sec.70(2)- Cancellation of Warrant.
B) Sec.82 – Proclamation for person absconding.
C) Sec.93- Search-warrant.
D) Sec.358- Victim compensation.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಪ್ರಕಾರ ಈ ಕೆಳಗಿನ ಪೈಕಿ ಯಾವುದೊಂದು ಸರಿಯಾದ ಹೊಂದಾಣಿಕೆಯಾಗಿರುವುದಿಲ್ಲ?
ಎ) ಕಲಂ 70(2) – ವಾರಂಟನ್ನು ರದ್ದುಪಡಿಸುವುದು
ಬಿ) ಕಲಂ 82 – ತಲೆಮರೆಸಿಕೊಂಡ ವ್ಯಕ್ತಿಗಾಗಿ ಉದ್ಘೋಷಣೆ
ಸಿ) ಕಲಂ 93 – ಶೋಧನಾ ವಾರಂಟ್
ಡಿ) ಕಲಂ 358 – ನೊಂದವರಿಗೆ ಪರಿಹಾರ

18 Which one of the following is incorrect combination as per the Transfer of Property Act, 1882?
A) Sec.41- Transfer by obstensible owner.
B) Sec.53- Fraudulent transfer.
C) Sec.100- Charges.
D) Sec.52A- Part Performance

ಸ್ವತ್ತು ವರ್ಗಾವಣೆ ಅಧಿನಿಯಮ, 1882ರ ಪ್ರಕಾರ ಈ ಕೆಳಗಿನ ಪೈಕಿ ಯಾವುದೊಂದು ಸರಿಯಾದ ಹೊಂದಾಣಿಕೆಯಾಗಿರುವುದಿಲ್ಲ?
ಎ) ಕಲಂ 41 – ತೋರಿಕೆಯ ಒಡೆಯನಿಂದ ವರ್ಗಾವಣೆ
ಬಿ) ಕಲಂ 53 – ಮೋಸದ ಮೂಲಕ ವರ್ಗಾವಣೆ

ಸಿ) ಕಲಂ 100 – ಋಣಭಾರಗಳು
ಡಿ) ಕಲಂ 52ಎ – ಭಾಗಶಃ ನೆರವೇರಿಕೆ

19 Which Section of the Code of Criminal Procedure, 1973 deals with releasing of convicted person on probation of good conduct or after admonition?
A) Sec.354.
B) Sec.356.
C) Sec.358.
D) Sec.360

ಅಪರಾಧ ಪ್ರಕ್ರಿಯಾ ಸಂಹಿತೆ 1973ರ ಯಾವ ಕಲಂ ಶಿಕ್ಷೆಯನ್ನು ವಿಧಿಸಿದ ವ್ಯಕ್ತಿಯನ್ನು ಸನ್ನಡತೆಯ ಪರಿವೀಕ್ಷಣೆಯ ಮೇಲೆ ಅಥವಾ ಎಚ್ಚರಿಕೆ ಕೊಟ್ಟು ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದ್ದಾಗಿದೆ?
ಎ) ಕಲಂ 354.
ಬಿ) ಕಲಂ 356.
ಸಿ) ಕಲಂ 358.
ಡಿ) ಕಲಂ 360.

20 Order 1 Rule 8 of the Code of Civil Procedure, 1908 relates to:
A) Adding or striking out parties to the suit.
B) Filing of represenatative suit.
C) Mis-joinder and non-joinder of parties.
D) suit in the name of wrong plaintiff.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 1 ನಿಯಮ 8 ಸಂಬಂಧಿಸಿದ್ದು:
ಎ) ದಾವಾಕ್ಕೆ ಪಕ್ಷಗಾರರನ್ನು ಸೇರಿಸುವುದಕ್ಕೆ ಅಥವಾ ತೆಗೆದುಹಾಕುವುದಕ್ಕೆ.
ಬಿ) ಪ್ರತಿನಿಧಿತ್ವ ದಾವೆಯನ್ನು ಸಲ್ಲಿಸುವುದಕ್ಕೆ.
ಸಿ) ಪಕ್ಷಗಾರರ ತಪ್ಪು ಸೇರ್ಪಡೆ ಅಥವಾ ಅಸೇರ್ಪಡೆಗೆ.
ಡಿ) ತಪ್ಪು ವಾದಿಯ ಹೆಸರಲ್ಲಿ ದಾವೆಗೆ.

21 If the Court permits amendment of pleadings without stipulating the time limit to carryout the amendment, as per Order VI Rule 18 of the Code of Civil Procedure, 1908, amendment has to be carried out within________ from the date of order.
A) 30 days.
B) 14 days.
C) 07 days.
D) no time limit.

ನ್ಯಾಯಾಲಯವು ವಾದವನ್ನು ತಿದ್ದುಪಡಿ ಮಾಡಲು ಅನುಮತಿಯನ್ನು ಕೊಟ್ಟು ತಿದ್ದುಪಡಿ ಮಾಡಲು ಯಾವುದೇ ಕಾಲಮಿತಿ ನಿಗದಿ ಪಡಿಸದಿದ್ದಲ್ಲಿ, ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 6 ನಿಯಮ 18ರ ಪ್ರಕಾರ ಆದೇಶವಾದ ದಿನಾಂಕದಿಂದ ________ ಒಳಗಡೆ ತಿದ್ದುಪಡಿಯನ್ನು ಮಾಡಬೇಕು.
ಎ) 30 ದಿನಗಳ.
ಬಿ) 14 ದಿನಗಳ.

ಸಿ) 07 ದಿನಗಳ.
ಡಿ) ಯಾವುದೇ ಕಾಲಮಿತಿ ಇಲ್ಲ

22 Which is the smallest state (area wise) in India?
A) Goa.
B) Sikkim.
C) Tripura.
D) Nagaland.

ಭಾರತದ ಅತಿ ಸಣ್ಣ (ವಿಸ್ತೀರ್ಣದ ಪ್ರಕಾರ) ರಾಜ್ಯ ಯಾವುದು?
ಎ) ಗೋವಾ
ಬಿ) ಸಿಕ್ಕಿಮ್
ಸಿ) ತ್ರಿಪುರ
ಡಿ) ನಾಗಾಲ್ಯಾಂಡ್

23 Which section of the Transfer of Property Act 1882 deals with "Rule against Perpetuity"
A) Section 14.
B) Section 15.
C) Section 16.
D) Section 17.

ಸ್ವತ್ತು ವರ್ಗಾವಣಾ ಅಧಿನಿಯಮ, 1882ರ ಯಾವ ಕಲಂ "ಶಾಶ್ವತತೆಯ ವಿರುದ್ಧ ನಿಯಮ"ವನ್ನು ವ್ಯವಹರಿಸುತ್ತದೆ?
ಎ) ಕಲಂ 14
ಬಿ) ಕಲಂ 15
ಸಿ) ಕಲಂ 16
ಡಿ) ಕಲಂ 17

24 Which right has been deleted from the list of Fundamental Rights but, has been retained as Constitutional Right in the Constitution of India?
A) Right to education.
B) Equality of opportunity in matters of public employment.
C) Right to property.
D) Right to assemble peaceably and without arms.

ಭಾರತೀಯ ಸಂವಿಧಾನದಲ್ಲಿ ಯಾವ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಿಂದ ತೆಗೆದುಹಾಕಿ ಅದನ್ನು ಸಾಂವಿಧಾನಿಕ ಹಕ್ಕು ಎಂದು ಉಳಿಸಿಕೊಳ್ಳಲಾಗಿದೆ?
ಎ) ವಿದ್ಯಾಭ್ಯಾಸದ ಹಕ್ಕು
ಬಿ) ಸಾರ್ವಜನಿಕ ನೌಕರಿಯಲ್ಲಿ ಸಮಾನ ಅವಕಾಶ
ಸಿ) ಆಸ್ತಿ ಹಕ್ಕು
ಡಿ) ಯಾವುದೇ ಶಸ್ತ್ರಾಸ್ತ್ರಗಳಿಲ್ಲದೆ ಮತ್ತು ಶಾಂತಿಯುತವಾಗಿ ಗುಂಪು ಸೇರುವ ಹಕ್ಕು

25 Under which provisions of the Code of Civil Procedure, 1908, a Court, which passed the decree, can stay the execution of an appealable decree?
A) Order XLI Rule 5 (1).
B) Order XLI Rule 6 (1).
C) Order XLI Rule 5 (2).
D) Order XLI Rule 6 (2).

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿನ ಯಾವ ನಿಬಂಧನೆಯ ಪ್ರಕಾರ ಡಿಕ್ರಿಯನ್ನು ಮಾಡಿದ ನ್ಯಾಯಾಲಯವೇ ಅಪೀಲಿಯ ಡಿಕ್ರಿಯ ಅಮಲ್ಜಾರಿಯನ್ನು ತಡೆಹಿಡಿಯಬಹುದು?
ಎ) ಕ್ರಮಾದೇಶ 41 ನಿಯಮ 5(1).
ಬಿ) ಕ್ರಮಾದೇಶ 41 ನಿಯಮ 6(1).
ಸಿ) ಕ್ರಮಾದೇಶ 41 ನಿಯಮ 5(2).
ಡಿ) ಕ್ರಮಾದೇಶ 41 ನಿಯಮ 6(2).

26 A places men with firearms at the outlets of a building and tells Z that they will fire at Z if Z attempts to leave the building. A committed __________
A) Wrongful restraint.
B) Wrongful confinement.
C) Abduction
D) No offence.

ಎ ಯು ಕಟ್ಟಡದ ಹೊರಗೆ ಬಂದೂಕುದಾರಿ ವ್ಯಕ್ತಿಗಳನ್ನು ನಿಲ್ಲಿಸಿ ಝಡ್ ಗೆ ಆತ ಕಟ್ಟಡದಿಂದ ಹೊರಗೆ ಹೋಗಲು ಪ್ರಯತ್ನ ಪಟ್ಟರೆ ಅವನತ್ತ ಗುಂಡು ಹಾರಿಸುತ್ತೇನೆ ಎಂದು ಹೇಳುತ್ತಾನೆ. ಎ ________ ಮಾಡಿರುತ್ತಾನೆ.
ಎ) ಅಕ್ರಮ ಪ್ರತಿಬಂಧ
ಬಿ) ಅಕ್ರಮ ಬಂಧನ
ಸಿ) ಅಪಹರಣ
ಡಿ) ಯಾವುದೇ ಅಪರಾಧ ಮಾಡಿಲ್ಲ

27 A residential premises, within the limits of Mangalore Municipal Corporation, was let out to a tenant on monthly rent of Rs.4,000/-. To evict the tenant from said premises, which Act is applicable?
A) The Karnataka Rent Act, 1999.
B) The Transfer of Property Act 1882.
C) Both A and B
D) Either A or B

ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಒಳಗಡೆ ಇರುವ ಒಂದು ವಾಸದ ಮನೆಯನ್ನು ರೂ.4,000/– ತಿಂಗಳ ಬಾಡಿಗೆಗೆ ಬಾಡಿಗೆದಾರನಿಗೆ ಬಾಡಿಗೆ ಕೊಡಲಾಗಿತ್ತು. ಆ ಬಾಡಿಗೆದಾರನನ್ನು ಆ ಮನೆಯಿಂದ ಖುಲ್ಲಾ ಮಾಡಲು ಯಾವ ಕಾಯಿದೆ ಅನ್ವಯವಾಗುತ್ತದೆ?
ಎ) ಕರ್ನಾಟಕ ಬಾಡಿಗೆ ಅಧಿನಿಯಮ, 1999
ಬಿ) ಸ್ವತ್ತು ವರ್ಗಾವಣೆ ಅಧಿನಿಯಮ, 1882
ಸಿ) ಎ ಮತ್ತು ಬಿ ಎರಡೂ
ಡಿ) ಎ ಅಥವಾ ಬಿ

28 Which Article of the Constitution of India says that the Law declared by the Supreme Court shall be binding on all Courts within the territory of India?
A) Article 140.
B) Article 141.
C) Article 142.
D) Article 143.

ಭಾರತೀಯ ಸಂವಿಧಾನದ ಯಾವ ಅನುಚ್ಛೇದ ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ಕಾನೂನಿಗೆ ಭಾರತದ ರಾಜಕ್ಷೇತ್ರದಲ್ಲಿರುವ ಎಲ್ಲಾ ನ್ಯಾಯಾಲಯಗಳು ಬದ್ಧವಾಗಿರತಕ್ಕದ್ದು ಎಂದು ತಿಳಿಸುತ್ತದೆ?
ಎ) ಅನುಚ್ಛೇದ 140.
ಬಿ) ಅನುಚ್ಛೇದ 141.
ಸಿ) ಅನುಚ್ಛೇದ 142.
ಡಿ) ಅನುಚ್ಛೇದ 143.

29 When any Court dismissed the suit under under Order IX Rule 2 of the Code of Civil Procedure for non-service of summons in consequence of plaintiffs failure to pay the postal charges, an application to set the dismissal aside before the same court has to be filed under ________
A) Order IX Rule 3 of the Code of Civil Procedure, 1908.
B) Order IX Rule 4 of the Code of Civil Procedure, 1908.
C) Order IX Rule 9 of the Code of Civil Procedure, 1908.
D) Order IX Rule 13 of the Code of Civil Procedure, 1908.

ವಾದಿಯು ಅಂಚೆ ವೆಚ್ಚವನ್ನು ಪಾವತಿ ಮಾಡಲು ವಿಫಲನಾಗಿರುವುದರಿಂದ ಸಮನ್ಸ್ ಜಾರಿಯಾಗಿಲ್ಲ ಎನ್ನುವ ಕಾರಣದಿಂದ ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 9 ನಿಯಮ 2ರ ಅಡಿಯಲ್ಲಿ ದಾವೆಯನ್ನು ಯಾವುದೇ ನ್ಯಾಯಾಲಯವು ವಜಾ ಮಾಡಿದಲ್ಲಿ, ಆ ಆದೇಶವನ್ನು ರದ್ದುಗೊಳಿಸಲು ಅರ್ಜಿಯನ್ನು ಅದೇ ನ್ಯಾಯಾಲಯದ ಮುಂದೆ ________ ಅಡಿಯಲ್ಲಿ ಸಲ್ಲಿಸಬೇಕು.
ಎ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 9 ನಿಯಮ 3.
ಬಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 9 ನಿಯಮ 4.
ಸಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 9 ನಿಯಮ 9.
ಡಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 9 ನಿಯಮ 13.

30 Who played for only one team in all the 14 editions of the Indian Premier League (IPL)?
A) M.S.Dhoni for Chennai Super Kings.
B) Virat Kohli for Royal Challengers Bengaluru.
C) Rohith Sharma for Mumbai Indians.
D) None

ಇಂಡಿಯನ್ ಪ್ರೀಮಿಯರ ಲೀಗ್ (ಐ.ಪಿ.ಎಲ್.)ನ ಎಲ್ಲಾ 14 ಆವೃತ್ತಿಗಳಲ್ಲಿ ಕೇವಲ ಒಂದೇ ಒಂದು ತಂಡದಲ್ಲಿ ಆಡಿದ ಆಟಗಾರ ಯಾರು?
ಎ) ಚನ್ನೈ ಸೂಪರ್ ಕಿಂಗ್ಸ್ ಪರ ಎಂ.ಎಸ್.ಧೋನಿ
ಬಿ) ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ವಿರಾಟ್ ಕೊಹ್ಲಿ

ಸಿ) ಮುಂಬಯಿ ಇಂಡಿಯನ್ಸ್ ಪರ ರೋಹಿತ್ ಶರ್ಮ
ಡಿ) ಯಾರು ಇಲ್ಲ

31 Who administers oath to the Governer of a State?
A) President of India.
B) Prime Minister of India.
C) Chief Justice of the High Court of that state.
D) Chief Minister of that state.

ರಾಜ್ಯದ ರಾಜ್ಯಪಾಲರಿಗೆ ಪ್ರಮಾಣ ವಚನವನ್ನು ಯಾರು ಭೋದಿಸುತ್ತಾರೆ?
ಎ) ಭಾರತದ ರಾಷ್ಟ್ರಪತಿ
ಬಿ) ಭಾರತದ ಪ್ರಧಾನ ಮಂತ್ರಿ
ಸಿ) ಆ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ
ಡಿ) ಆ ರಾಜ್ಯದ ಮುಖ್ಯಮಂತ್ರಿ

32 As per Sec.5 of the Karnataka Rent Act, 1999, in the event of death of a tenant, right of tenancy shall devolve for a period of _______from the date of the death of said tenant, to his successors.
A) one year.
B) three years.
C) five years.
D) seven years.

ಕರ್ನಾಟಕ ಬಾಡಿಗೆ ಅಧಿನಿಯಮ, 1999ರ ಕಲಂ 5ರ ಪ್ರಕಾರ ಓರ್ವ ಬಾಡಿಗೆದಾರನು ಮರಣ ಹೊಂದಿದ ಸಂದರ್ಭದಲ್ಲಿ ಆತನ ಉತ್ತರಾಧಿಕಾರಿಗಳಿಗೆ ಬಾಡಿಗೆ ಹಕ್ಕು ಆ ಬಾಡಿಗೆದಾರ ಮರಣ ಹೊಂದಿದ ದಿನಾಂಕದಿಂದ __________ ವರೆಗೆ ಮುಂದುವರೆಯುತ್ತದೆ.
ಎ) ಒಂದು ವರ್ಷದ
ಬಿ) ಮೂರು ವರ್ಷದ
ಸಿ) ಐದು ವರ್ಷದ
ಡಿ) ಏಳು ವರ್ಷದ

33 Habitually dealing in stolen property, an offence punishable under Sec.413 of the Indian Penal Code is traible by:
A) Court of Sessions.
B) Court of Chief Judicial Magistrate.
C) Court of Judicial Magistrate First class.
D) Court of Any magistrate.

ಭಾರತೀಯ ದಂಡ ಸಂಹಿತೆಯ ಕಲಂ 413ರ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಕಳವು ಮಾಲಿನ ವ್ಯವಹಾರವನ್ನು ರೂಢಿಗತವಾಗಿ ನಡೆಸುವ ಅಪರಾಧದ ವಿಚಾರಣೆ ಮಾಡಬೇಕಾಗಿರುವುದು:
ಎ) ಸತ್ರ ನ್ಯಾಯಾಲಯ
ಬಿ) ಮುಖ್ಯ ನ್ಯಾಯಾಂಗ ದಂಡಾಧಿಕಾರಿಗಳ ನ್ಯಾಯಾಲಯ
ಸಿ) ಪ್ರಥಮ ದರ್ಜೆ ನ್ಯಾಯಾಂಗ ದಂಡಾಧಿಕಾರಿಗಳ ನ್ಯಾಯಾಲಯ
ಡಿ) ಯಾವುದೇ ದಂಡಾಧಿಕಾರಿಗಳ ನ್ಯಾಯಾಲಯ

34 A sells, by auction, to B, a horse which A knows to be unsound. A says nothing to B about horse's unsoundness. A ________
A) committed no fraud.
B) committed fraud.
C) committed misrepresentation.
D) committed undue influence.

ಸದೃಢವಿಲ್ಲವೆಂದು ತಾನು ತಿಳಿದಿರುವ ಕುದುರೆಯೊಂದನ್ನು ಎ ಯು ಹರಾಜಿನ ಮೂಲಕ ಬಿ ಗೆ ಮಾರಾಟ ಮಾಡುತ್ತಾನೆ. ಎ ಯು ಬಿ ಗೆ ಕುದುರೆಯ ಸದೃಡತಿಯ ಬಗ್ಗೆ ಏನನ್ನು ಹೇಳುವುದಿಲ್ಲ. ಎ ____________
ಎ) ಯಾವುದೇ ಮೋಸ ಮಾಡಿಲ್ಲ
ಬಿ) ಮೋಸ ಮಾಡಿರುತ್ತಾನೆ
ಸಿ) ತಪ್ಪು ನಿರೂಪಣೆ ಮಾಡಿರುತಾನೆ
ಡಿ) ಅನುಚಿತ ಪ್ರಭಾವ ಬೀರಿರುತ್ತಾನೆ

35 Which Section of the Indian Evidence Act, 1872 states that "Admitted facts need not be proved"
A) Section 58.
B) Section 57.
C) Section 56.
D) Section 55.

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಯಾವ ಕಲಂ "ಒಪ್ಪಿಕೊಂಡ ವಾಸ್ತವಿಕತೆಗಳನ್ನು ಸಾಬೀತು ಪಡಿಸಬೇಕಾಗಿಲ್ಲ" ಎಂದು ತಿಳಿಸುತ್ತದೆ.
ಎ) ಕಲಂ 58.
ಬಿ) ಕಲಂ 57.
ಸಿ) ಕಲಂ 56.
ಡಿ) ಕಲಂ 55.

36 Under the Transfer of Property Act, 1882, a lessee of an immovable property continuing in possession of the leased property on determination of lease period, with the consent of the lessor, is called as________
A) tenant by holding over.
B) tenant at sufferance.
C) protected tenant.
D) None of the above.

ಸ್ವತ್ತು ವರ್ಗಾವಣೆ ಅಧಿನಿಯಮ, 1882ರ ಅಡಿಯಲ್ಲಿ ಗೇಣಿಯ ಅವಧಿ ಮುಕ್ತಾಯವಾದ ಬಳಿಕವು ಗೇಣಿಗೆ ಕೊಡುವವನ ಒಪ್ಪಿಗೆ ಪಡೆದು ಗೇಣಿಗೆ ಕೊಟ್ಟ ಸ್ಥಿರಾಸ್ತಿಯ ಸ್ವಾಧೀನದಲ್ಲಿ ಗೇಣಿದಾರನು ಮುಂದುವರಿದು ಇದ್ದಲ್ಲಿ ಅವನನ್ನು ________ ಎಂದು ಕರೆಯುತ್ತಾರೆ.
ಎ) ಅತಿಧಾರಣ ಗೇಣಿದಾರ
ಬಿ) ಬಳಲುತ್ತಿರುವ ಗೇಣಿದಾರ
ಸಿ) ರಕ್ಷಿಸಲ್ಪಟ್ಟ ಗೇಣಿದಾರ
ಡಿ) ಮೇಲಿನ ಯಾವುದೂ ಅಲ್ಲ

37 The landmark Judgment of the Hon'ble Supreme Court in respect of triple talaq is in following case:
A) Mohammed Ahmad Khan vs Shah Bano Begam.
B) Indra Sawhney and Union of India.
C) Shayara Bano vs Union of India.
D) I.R.Coelho vs State of Tamilnadu.

ತ್ರಿವಳಿ ತಲಾಕ್‌ಗೆ ಸಂಬಂಧಿಸಿದಂತೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಮಹತ್ತರವಾದ ತೀರ್ಪು ಈ ಕೆಳಗಿನ ಪ್ರಕರಣದಲ್ಲಿ ಆಗಿತ್ತು.
ಎ) ಮೊಹಮ್ಮದ್ ಅಹಮದ್ ಖಾನ್ ವಿರುದ್ಧ ಷಹ ಬಾನು ಬೇಗಂ
ಬಿ) ಇಂದ್ರ ಸಹನಿ ವಿರುದ್ಧ ಯೂನಿಯನ್ ಆಫ್ ಇಂಡಿಯ
ಸಿ) ಷಾಯರ ಬಾನು ವಿರುದ್ಧ ಯೂನಿಯನ್ ಆಫ್ ಇಂಡಿಯ
ಡಿ) ಐ.ಆರ್.ಕೊಯಲೊ ವಿರುದ್ಧ ತಮಿಳುನಾಡು ರಾಜ್ಯ

38 Which Section of the Karnataka Rent Act, 1999 says that, to contest the eviction petition filed under Sec.27 of the said Act, tenant shall pay or deposit all arrears of rent?
A) Section 45
B) Section 44
C) Section 43
D) Section 42

ಕರ್ನಾಟಕ ಬಾಡಿಗೆ ಅಧಿನಿಯಮ, 1999ರ ಯಾವ ಕಲಂ ಆ ಕಾಯಿದೆಯ ಕಲಂ 27ರ ಅಡಿಯಲ್ಲಿ ಸಲ್ಲಿಸಿದ ಖುಲ್ಲಾ ಪಡಿಸುವ ಅರ್ಜಿಯನ್ನು ವಿರೋಧಿಸಲು ಬಾಡಿಗೆದಾರನು ಬಾಕಿ ಇರುವ ಎಲ್ಲಾ ಬಾಡಿಗೆಯನ್ನು ಪಾವತಿ ಮಾಡಬೇಕು ಅಥವಾ ಠೇವಣಿ ಇಡಬೇಕು ಎಂದು ತಿಳಿಸುತ್ತದೆ.
ಎ) ಕಲಂ 45
ಬಿ) ಕಲಂ 44
ಸಿ) ಕಲಂ 43
ಡಿ) ಕಲಂ 42

39 Which one of the following is incorrect combination regarding directive principles of state policy, as per the Constitution of India?
A) Article 39A- Equal justice and free legal aid.
B) Article 44- Uniform Civil Code of the citizens
C) Article 48A- Protection and improvement of environment.
D) Article 50- Promotion of International peace and security.

ಭಾರತೀಯ ಸಂವಿಧಾನದ ಪ್ರಕಾರ ರಾಜ್ಯನೀತಿಯ ನಿರ್ದೇಶಕ ತತ್ವಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಪೈಕಿ ಯಾವುದೊಂದು ಸರಿಯಾದ ಹೊಂದಾಣಿಕೆಯಾಗಿರುವುದಿಲ್ಲ?
ಎ) ಅನುಚ್ಛೇಧ 39ಎ – ಸಮಾನ ನ್ಯಾಯ ಮತ್ತು ಉಚಿತ ಕಾನೂನು ನೆರವು
ಬಿ) ಅನುಚ್ಛೇಧ 44 – ನಾಗರೀಕರಿಗೆ ಏಕರೂಪದ ಸಿವಿಲ್ ಸಂಹಿತೆ
ಸಿ) ಅನುಚ್ಛೇಧ 48ಎ – ಪರಿಸರ ಸಂರಕ್ಷಣೆ ಮತ್ತು ಸುಧಾರಣೆ
ಡಿ) ಅನುಚ್ಛೇಧ 50 – ಅಂತರರಾಷ್ಟ್ರಿಯ ಶಾಂತಿ ಮತ್ತು ಭದ್ರತೆಯನ್ನು ವೃದ್ಧಿಗೊಳಿಸುವುದು

40 Which of the following orders does not amount to a decree under Section 2(2) of Code of Civil Procedure, 1908?
A) An order rejecting plaint under Order 7 Rule 11 Code of Civil Procedure, 1908.
B) An order under Section 144 Code of Civil Procedure, 1908
C) An order for dismissal of the suit for default.
D) None of the above.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 2(2)ರ ಅಡಿಯಲ್ಲಿ ಈ ಕೆಳಗಿನ ಪೈಕಿ ಯಾವ ಆದೇಶವನ್ನು ಡಿಕ್ರಿಯಾಗಿ ಭಾವಿಸಲಾಗುವುದಿಲ್ಲ?
ಎ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 7 ನಿಯಮ 11ರ ಅಡಿಯಲ್ಲಿ ವಾದಪತ್ರವನ್ನು ತಿರಸ್ಕರಿಸಲು ಮಾಡಿರುವ ಆದೇಶ
ಬಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 144ರ ಅಡಿಯಲ್ಲಿ ಮಾಡಿರುವ ಆದೇಶ
ಸಿ) ತಪ್ಪಿತಕ್ಕಾಗಿ ದಾವಾ ವಜಾ ಮಾಡಿದ ಆದೇಶ
ಡಿ) ಮೇಲಿನ ಯಾವುದೂ ಅಲ್ಲ

41 Under Sec.428 of Code of Criminal Procedure, 1973, the period of detention undergone by a convict during ________shall be set off against the term of imprisonment imposed on him.
A) investigation of the case.
B) trial of the case.
C) enquiry of the case.
D) All the above.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 428ರ ಅಡಿಯಲ್ಲಿ ಆಪಾದಿತನನ್ನು ________ಯ ಕಾಲದಲ್ಲಿ ಬಂಧಿಸಿಟ್ಟಿರುವ ಅವಧಿಯನ್ನು ಆತನಿಗೆ ವಿಧಿಸಿದ ಕಾರವಾಸದ ಅವಧಿಯಲ್ಲಿ ಕಳೆಯತಕ್ಕದ್ದು.
ಎ) ಮೊಕದ್ದಮೆಯ ತನಿಖೆ
ಬಿ) ಮೊಕದ್ದಮೆಯ ಆರೋಪ ವಿಚಾರಣೆ
ಸಿ) ಮೊಕದ್ದಮೆಯ ವಿಚಾರಣೆ
ಡಿ) ಮೇಲಿನ ಎಲ್ಲವೂ

42 The recent landmark decision of Hon'ble Supreme Court in "Vineeta Sharma vs Rakesh Sharma and others" is relating to the following subject:
A) Reservation in promotions.
B) Ayodhya dispute.
C) Validity of new Land Acquisition Act.
D) Daughters coparcenery right.

"ವಿನೀತ ಶರ್ಮ ವಿರುದ್ಧ ರಾಕೇಶ್ ಶರ್ಮ ಮತ್ತು ಇತರರು" ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ಮಹತ್ವದ ತೀರ್ಪು ಈ ಕೆಳಗಿನ ವಿಷಯಕ್ಕೆ ಸಂಬಂಧಿಸಿದ್ದಾಗಿದೆ:
ಎ) ಬಡ್ತಿಯಲ್ಲಿ ಮೀಸಲಾತಿ
ಬಿ) ಅಯೋಧ್ಯ ವಿವಾದ
ಸಿ) ಹೊಸ ಭೂ ಸ್ವಾಧೀನ ಕಾಯಿದೆಯ ಸಿಂಧುತ್ವ
ಡಿ) ಹೆಣ್ಣು ಮಗಳ ಆಸ್ತಿ ಹಕ್ಕು

43 As per Section 58 of the Indian Contract Act, 1872, in the case of an alternative promise, one branch of which is legal and the other illegal, ______

A) both the branches will be enforceable.
B) both the branches will be unenforceable.
C) the legal branch alone can be enforceable.
D) None of the above.

ಭಾರತೀಯ ಕರಾರು ಅಧಿನಿಯಮ, 1872ರ ಕಲಂ 58ರ ಪ್ರಕಾರ ಪರ್ಯಾಯ ವಾಗ್ದಾನದ ಒಂದು ಭಾಗವು ಕಾನೂನು ಸಮ್ಮತ ಮತ್ತು ಇನ್ನೊಂದು ಭಾಗವು ಕಾನೂನು ಬಾಹಿರವಾಗಿದ್ದಾಗ __________
ಎ) ಎರಡೂ ಭಾಗಗಳನ್ನು ಜಾರಿಗೊಳಿಸಬಹುದು
ಬಿ) ಎರಡೂ ಭಾಗಗಳನ್ನು ಜಾರಿಗೊಳಿಸಲಾಗುವುದಿಲ್ಲ
ಸಿ) ಕಾನೂನು ಸಮ್ಮತ ಭಾಗ ಮಾತ್ರ ಜಾರಿಗೊಳಿಸಬಹುದು
ಡಿ) ಮೇಲಿನ ಯಾವುದೂ ಅಲ್ಲ

44 If a witness makes a statement in Court, knowing it to be false, he committed the offence of ______
A) Breach of Trust.
B) Mischief.
C) Perjury.
D) No offence.

ಓರ್ವ ಸಾಕ್ಷಿಯು ತನಗೆ ಸುಳ್ಳು ಎಂದು ಗೊತ್ತಿದ್ದು ಕೂಡ ಅಂತಹ ಹೇಳಿಕೆಯನ್ನು ನ್ಯಾಯಾಲಯದ ಮುಂದೆ ಕೊಟ್ಟಲ್ಲಿ ಆತನು __________ ಅಪರಾಧವನ್ನು ಮಾಡಿರುತ್ತಾನೆ.
ಎ) ವಿಶ್ವಾಸಘಾತ
ಬಿ) ಕಿಡಿಗೇಡಿತನ
ಸಿ) ಪ್ರಮಾಣಭಂಗ
ಡಿ) ಯಾವುದೇ ಅಪರಾಧ ಇಲ್ಲ

45 “When any person is arrested and interrogated by the police, he shall be entitled to meet an Advocate of his choice during interrogation, though not throughout interrogation”. As per Sec.41D of the Code of Criminal Procedure, 1973, above statement is:
A) True
B) False
C) partially true
D) None of the above.

"ಪೋಲಿಸರು ಯಾವುದೇ ವ್ಯಕ್ತಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ, ವಿಚಾರಣೆಯ ಕಾಲಕ್ಕೆ ಆತನಿಗೆ ತನ್ನ ವಕೀಲರನ್ನು ಭೇಟಿಯಾಗುವ ಅವಕಾಶ ಇದೆ, ಆದರೆ ವಿಚಾರಣೆಯ ಪೂರ್ತಿ ಅವಧಿಗೆ ಇರುವುದಿಲ್ಲ". ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 41ಡಿ ಯ ಪ್ರಕಾರ ಮೇಲಿನ ಹೇಳಿಕೆಯು:
ಎ) ಸತ್ಯ
ಬಿ) ಸುಳ್ಳು

ಸಿ) ಭಾಗಶಃ ಸತ್ಯ
ಡಿ) ಮೇಲಿನ ಯಾವುದು ಅಲ್ಲ.

46 As per Sec.320(9) of the Code of Criminal Procedure, 1973, offences, other than those provided by Sec.320 of the said Code ______
A) cannot be compounded.
B) can be compounded with the permission of the Court.
C) can be compounded.
D) None of the Above.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 320(9)ರ ಪ್ರಕಾರ ಆ ಸಂಹಿತೆಯ ಕಲಂ 320ರ ಅಡಿಯಲ್ಲಿ ಉಪಬಂಧಿಸಿದಂತೆ ಹೊರತು ಪಡಿಸಿ ಇತರ ಅಪರಾಧಗಳನ್ನು __________
ಎ) ರಾಜಿ ಮಾಡಿಕೊಳ್ಳಲಾಗುವುದಿಲ್ಲ
ಬಿ) ನ್ಯಾಯಾಲಯದಿಂದ ಪರವಾನಿಗೆ ಪಡೆದು ರಾಜಿ ಮಾಡಿಕೊಳ್ಳಬಹುದು
ಸಿ) ರಾಜಿ ಮಾಡಿಕೊಳ್ಳಬಹುದು
ಡಿ) ಮೇಲಿನ ಯಾವುದು ಅಲ್ಲ.

47 "Evidence before charge" shall be recorded in following cases:
A) In all warrant triable cases.
B) In all summons triable cases
C) In warrant triable cases instituted on police report
D) In warrant triable cases instituted otherwise than on police report.

"ದೋಷಾರೋಪಣೆಯ ಮೊದಲು ಸಾಕ್ಷ್ಯ" ವನ್ನು ಈ ಕೆಳಗಿನ ಪ್ರಕರಣಗಳಲ್ಲಿ ದಾಖಲು ಮಾಡತಕ್ಕದ್ದು:
ಎ) ಎಲ್ಲಾ ವಾರಂಟು ಮೊಕದ್ದಮೆಗಳಲ್ಲಿ
ಬಿ) ಎಲ್ಲಾ ಸಮನ್ಸ್ ಮೊಕದ್ದಮೆಗಳಲ್ಲಿ
ಸಿ) ಪೋಲೀಸ್ ವರದಿಯ ಮೇಲೆ ಹೂಡಲಾದ ವಾರಂಟ್ ಮೊಕದ್ದಮೆಗಳಲ್ಲಿ
ಡಿ) ಪೋಲೀಸ್ ವರದಿಯ ಮೇಲಲ್ಲದೆ ಅನ್ಯತಾ ಹೂಡಲಾದ ವಾರಂಟು ಮೊಕದ್ದಮೆಗಳಲ್ಲಿ

48 As per Sec.320 of the Code of Criminal Procedure, 1973, an offence punishable under Sec.506 of the Indian Penal Code ________
A) can be compounded.
B) cannot be compounded
C) can be compounded only with the permission of the Court.
D) None of the Above.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 320ರ ಪ್ರಕಾರ ಭಾರತೀಯ ದಂಡ ಸಂಹಿತೆಯ ಕಲಂ 506ರ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಅಪರಾಧವನ್ನು __________
ಎ) ರಾಜಿ ಮಾಡಿಕೊಳ್ಳಬಹುದು
ಬಿ) ರಾಜಿ ಮಾಡಿಕೊಳ್ಳಲಾಗುವುದಿಲ್ಲ
ಸಿ) ನ್ಯಾಯಾಲಯದಿಂದ ಪರವಾನಿಗೆ ಪಡೆದು ಮಾತ್ರ ರಾಜಿ ಮಾಡಿಕೊಳ್ಳಬಹುದು
ಡಿ) ಮೇಲಿನ ಯಾವುದು ಅಲ್ಲ.

49 As per Section 29 of the Indian Contract Act, 1872, agreements, the meaning of which is not certain, or capable of being made certain, are __________

A) Voidable.
B) illegal.
C) Void.
D) enforceable.

ಭಾರತೀಯ ಕರಾರು ಅಧಿನಿಯಮ, 1872ರ ಕಲಂ 29ರ ಪ್ರಕಾರ ಅನಿಶ್ಚಿತ ಅಥವಾ ನಿಶ್ಚಿತಗೊಳಿಸಲು ಸಾಧ್ಯವಾಗದ ಒಪ್ಪಂದಗಳು __________

ಎ) ಶೂನ್ಯಗೊಳಿಸಬಹುದಾಗಿರುತ್ತದೆ
ಬಿ) ಕಾನೂನು ಬಾಹಿರವಾಗಿರುತ್ತದೆ
ಸಿ) ಶೂನ್ಯವಾಗಿರುತ್ತದೆ
ಡಿ) ಜಾರಿಗೊಳಿಸಬಹುದಾಗಿರುತ್ತದೆ

50 The maker, acceptor or indorser respectively of a Negotiable Instrument is discharged from liability there on:

A) By cancellation.
B) By release.
C) By payment.
D) All the above.

ಒಂದು ವರ್ಗಾವಣೀಯ ಲಿಖಿತದ ಕರ್ತನು, ಅಂಗೀಕೃತನು ಅಥವಾ ಹಿಂಬರಹಗಾರನು ಅದರ ಋಣಗಳಿಂದ __________ ವಿಮೋಚಿತನಾಗುತ್ತಾನೆ:

ಎ) ರದ್ದುಪಡಿಸುವಿಕೆಯ ಮೂಲಕ
ಬಿ) ಬಿಡುಗಡೆಯ ಮೂಲಕ
ಸಿ) ಪಾವತಿಯ ಮೂಲಕ
ಡಿ) ಮೇಲಿನ ಎಲ್ಲವೂ

51 Which Article of the Constitution of India describes the procedure to amend the Constitution?

A) Article 368
B) Article 367
C) Article 366
D) Article 365

ಭಾರತೀಯ ಸಂವಿಧಾನದ ಯಾವು ಅನುಚ್ಛೇಧವು ಸಂವಿಧಾನವನ್ನು ತಿದ್ದುಪಡಿ ಮಾಡುವ ಕ್ರಮಗಳನ್ನು ವಿವರಿಸುತ್ತದೆ?

ಎ) ಅನುಚ್ಛೇಧ 368
ಬಿ) ಅನುಚ್ಛೇಧ 367
ಸಿ) ಅನುಚ್ಛೇಧ 366
ಡಿ) ಅನುಚ್ಛೇಧ 365

52 As per Section 165 of the Indian Evidence Act, 1872, in respect of any answer given by a witness in reply to the questions asked by the Judge, parties__________

A) are entitled to make any objections.

B) have absolute right to cross-examine the witness.

C) have right to cross-examine only with leave of the Court.

D) are entitled to make objections only with leave of the Court.

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 165ರ ಪ್ರಕಾರ ನ್ಯಾಯಾಧೀಶರು ಕೇಳಿರುವ ಪ್ರಶ್ನೆಗೆ ಸಾಕ್ಷಿಯು ಕೊಟ್ಟ ಉತ್ತರಕ್ಕೆ ಸಂಬಂಧಪಟ್ಟಂತೆ ಪಕ್ಷಗಾರರಿಗೆ________

ಎ) ಯಾವುದೇ ತಕರಾರು ಮಾಡುವ ಅಧಿಕಾರವಿದೆ.

ಬಿ) ಸಾಕ್ಷಿಯನ್ನು ಪಾಟೀಸವಾಲು ಮಾಡುವ ಸಂಪೂರ್ಣ ಹಕ್ಕು ಇದೆ.

ಸಿ) ನ್ಯಾಯಾಲಯದ ಒಪ್ಪಿಗೆಪಡೆದು ಮಾತ್ರ ಪಾಟೀಸವಾಲು ಮಾಡಬಹುದು.

ಡಿ) ನ್ಯಾಯಾಲಯದ ಒಪ್ಪಿಗೆಪಡೆದು ಮಾತ್ರ ತಕರಾರು ಮಾಡಬಹುದು.

53 Which Article of the Constitution of India was amended to provide reservation in promotions?

A) Article 14

B) Article 15

C) Article 16

D) Article 17

ಬಡ್ತಿಯಲ್ಲಿ ಮೀಸಲಾತಿಯನ್ನು ಒದಗಿಸುವ ಸಲುವಾಗಿ ಭಾರತೀಯ ಸಂವಿಧಾನದ ಯಾವ ಅನುಚ್ಛೇಧವನ್ನು ತಿದ್ದುಪಡಿ ಮಾಡಲಾಗಿತ್ತು?

ಎ) ಅನುಚ್ಛೇಧ 14

ಬಿ) ಅನುಚ್ಛೇಧ 15

ಸಿ) ಅನುಚ್ಛೇಧ 16

ಡಿ) ಅನುಚ್ಛೇಧ 17

54 National Legal Services day is celeberated in India on _________.

A) 26th November.

B) 21st June.

C) 3rd December.

D) 9th November.

ಭಾರತದಲ್ಲಿ ರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆಯನ್ನು ____________ರಂದು ಆಚರಿಸಲಾಗುತ್ತದೆ.

ಎ) ನವೆಂಬರ್ 26

ಬಿ) ಜೂನ್ 21

ಸಿ) ಡಿಸೆಂಬರ್ 3

ಡಿ) ನವೆಂಬರ್ 9

55 A' leased out his immovable property to 'B' for manufacturing the spare parts of tractor. In the abense of any contract or local law or usage to the contrary, said lease is terminable by giving _______ notice.

A) 15 days

B) 30 days.

C) six months.
D) one year.

'ಎ' ಯು 'ಬಿ' ಗೆ ತನ್ನ ಸ್ಥಿರಾಸ್ತಿಯನ್ನು ಟ್ರಾಕ್ಟರಿನ ಬಿಡಿ ಭಾಗಗಳ ಉತ್ಪಾದನೆ ಮಾಡುವ ಸಲುವಾಗಿ ಗೇಣಿಗೆ ಕೊಟ್ಟಿರುತ್ತಾರೆ. ತದ್ವಿರುದ್ದದ ಕರಾರು ಅಥವಾ ಸ್ಥಳೀಯ ಕಾನೂನು ಅಥವಾ ಸ್ಥಳೀಯ ಆಚಾರಣೆ ಇಲ್ಲದಿರುವಲ್ಲಿ ಆ ಗೇಣಿಯನ್ನು ___________ ನೋಟೀಸು ಕೊಡುವ ಮೂಲಕ ಕೊನೆಗೊಳಿಸಬಹುದು.
ಎ) 15 ದಿನಗಳ
ಬಿ) 30 ದಿನಗಳ
ಸಿ) ಆರು ತಿಂಗಳ
ಡಿ) ಒಂದು ವರ್ಷ

56 As per Order XXXIX Rule 3A of the Code of Civil Procedure, 1908, where an injunction has been granted without giving notice to the opposite party, the Court shall make an endevour to finally dispose of the application within ________ from the date on which injunction was granted?
A) 7 days.
B) 14 days.
C) 30 days.
D) 1 month.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 39 ನಿಯಮ 3ಎ ಪ್ರಕಾರ ಎದುರು ಪಕ್ಷಗಾರನಿಗೆ ನೋಟೀಸು ಕೊಡದೆಯೇ ನಿರ್ಭಂದಕಾಜ್ಞೆಯನ್ನು ಮಾಡಿರುವಲ್ಲಿ, ಹಾಗೆ ನಿರ್ಭಂದಕಾಜ್ಞೆಯನ್ನು ಮಾಡಿದ ___________ ಒಳಗಾಗಿ ಆ ಅರ್ಜಿಯನ್ನು ಅಂತಿಮವಾಗಿ ವಿಲೇ ಮಾಡಲು ನ್ಯಾಯಾಲಯವು ಪ್ರಯತ್ನಿಸತಕ್ಕದ್ದು.
ಎ) 7 ದಿನಗಳ.
ಬಿ) 14 ದಿನಗಳ.
ಸಿ) 30 ದಿನಗಳ.
ಡಿ) 1 ತಿಂಗಳ.

57 A threatens to publish a defamatory libel concerning Z unless Z gives him money. A thus induces Z to give him money. A has committed the offence of _________
A) Defamation.
B) Robbery
C) Criminal Intimidation.
D) Extortion

'ಎ' ಯು 'ಝಡ್' ತನಗೆ ಹಣವನ್ನು ನೀಡದಿದ್ದಲ್ಲಿ 'ಝಡ್'ನ ಕುರಿತಾದ ಒಂದು ಮಾನಹಾನಿಯನ್ನುಂಟುಮಾಡುವ ಲೇಖನವನ್ನು ಪ್ರಕಟಿಸುತ್ತೇನೆಂದು ಬೆದರಿಸುತ್ತಾನೆ. ಆ ಮೂಲಕ 'ಎ' 'ಝಡ್'ಗೆ ಹಣ ನೀಡಲು ಪ್ರೇರೆಪಿಸುತ್ತಾನೆ. 'ಎ' _________ ಅಪರಾಧವನ್ನು ಮಾಡಿದ್ದಾನೆ
ಎ) ಮಾನಹಾನಿ.
ಬಿ) ಸುಲಿಗೆ
ಸಿ) ಅಪರಾಧಿಕ ಭಯೋತ್ಪಾದನೆ.
ಡಿ) ಬಲಾದ್ಗ್ರಹಣ

58 Which of the following issue can be heard as the preliminary issue as per Order 14 Rule 2 of Code of Civil Procedure, 1908?
A) Any issue.
B) Issue of law only.
C) Issue of fact only.
D) Issue involving both question of law and fact.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 14 ನಿಯಮ 2ರ ಪ್ರಕಾರ ಈ ಕೆಳಗಿನ ಪೈಕಿ ಯಾವ ವಿವಾದಾಂಶವನ್ನು ಪ್ರಾಥಮಿಕ ವಿವಾದಾಂಶ ಎಂದು ಸುನಾವಣೆ ಮಾಡಬಹುದು?
ಎ) ಯಾವುದೇ ವಿವಾದಾಂಶ
ಬಿ) ಕಾನೂನಾಧಾರಿತ ವಿವಾದಾಂಶ ಮಾತ್ರ
ಸಿ) ವಿಷಯ ಆಧಾರಿತ ವಿವಾದಾಂಶ ಮಾತ್ರ
ಡಿ) ಕಾನೂನು ಮತ್ತು ವಿಷಯ ಎರಡು ಒಳಗೊಂಡಿರುವ ವಿವಾದಾಂಶ

59 What is the full form of ICMR?
A) Indian Council for Medical Research.
B) International Council for Medical Research.
C) International Court for Monitoring Ragging.
D) None of Above.

ಐಸಿಎಂಆರ್ ನ ಪೂರ್ಣ ರೂಪ ಯಾವುದು?
ಎ) ಇಂಡಿಯನ್ ಕೌನ್ಸಿಲ್ ಫಾರ್ ಮೆಡಿಕಲ್ ರಿಸರ್ಚ್
ಬಿ) ಇಂಟರ್‌ನ್ಯಾಷನಲ್ ಕೌನ್ಸಿಲ್ ಫಾರ್ ಮೆಡಿಕಲ್ ರಿಸರ್ಚ್
ಸಿ) ಇಂಟರ್‌ನ್ಯಾಷನಲ್ ಕೋರ್ಟ್ ಫಾರ್ ಮಾನಿಟರಿಂಗ್ ರ್‍ಯಾಗಿಂಗ್
ಡಿ) ಮೇಲಿನ ಯಾವುದು ಅಲ್ಲ

60 A mortgage by deposit of title deed is called ___________
A) Anomolous mortgage.
B) English mortgage.
C) Usefractuary mortgage
D) Equitable mortgage

ಸ್ವಾಮ್ಯ ಪತ್ರಗಳ ಠೇವಣಿ ಮೂಲಕ ಅಡಮಾನವನ್ನು _________ ಎಂದು ಕರೆಯುತ್ತಾರೆ
ಎ) ಅನಾಮಿ ಅಡಮಾನ
ಬಿ) ಆಂಗ್ಲ ಅಡಮಾನ
ಸಿ) ಭೋಗ್ಯದ ಅಡಮಾನ
ಡಿ) ಸಮಾನ ಅಡಮಾನ

61 Who, among the following Supreme Court judges, has become Judge of the Supreme Court of India directly, without becoming a Judge of any High Court?
A) Justice Uday U Lalit.
B) Justice D.Y.Chandrachud.
C) Justice K.M.Joseph.
D) Justice B.R.Gavai.

ಸರ್ವೋಚ್ಚ ನ್ಯಾಯಾಲಯದ ಈ ಕೆಳಗಿನ ನ್ಯಾಯಮೂರ್ತಿಗಳ ಪೈಕಿ ಯಾರು ಯಾವುದೇ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗದೆ ನೇರವಾಗಿ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದರು?
ಎ) ನ್ಯಾಯಮೂರ್ತಿ ಉದಯ್ ಯು ಲಲಿತ್
ಬಿ) ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್
ಸಿ) ನ್ಯಾಯಮೂರ್ತಿ ಕೆ.ಎಂ.ಜೋಸೆಫ್
ಡಿ) ನ್ಯಾಯಮೂರ್ತಿ ಬಿ.ಆರ್.ಗವಾಯಿ

62 As per Section 142 of the Indian Contract Act 1872, a guarantee obtained by misrepresentation made by the creditor, is ____________.
A) void.
B) voidable
C) valid.
D) invalid.

ಭಾರತ ಕರಾರು ಅಧಿನಿಯಮ 1872ರ ಕಲಂ 142ರ ಪ್ರಕಾರ ಸಾಲಗಾರನು ತಪ್ಪು ನಿರೂಪಣೆಯ ಮೂಲಕ ಪಡೆದ ಖಾತರಿಯು ______________
ಎ) ಶೂನ್ಯವಾಗುವುದು.
ಬಿ) ಶೂನ್ಯಗೊಳಿಸಬಹುದಾಗುವುದು.
ಸಿ) ನ್ಯಾಯ ಸಮ್ಮತ.
ಡಿ) ನ್ಯಾಯ ಸಮ್ಮತವಲ್ಲದ್ದು.

63 Which one of the following is correct combination as per the Indian Contract Act, 1872?
A) Section 13- Consent.
B) Section 14- Coercion.
C) Section 15- Undue Influence.
D) Section 16- Fraud.

ಭಾರತೀಯ ಕರಾರು ಅಧಿನಿಯಮ, 1872ರ ಪ್ರಕಾರ ಈ ಕೆಳಗಿನ ಪೈಕಿ ಯಾವುದೊಂದು ಸರಿಯಾದ ಹೊಂದಾಣಿಕೆ ಆಗಿರುತ್ತದೆ?
ಎ) ಕಲಂ 13 – ಸಮ್ಮತಿ
ಬಿ) ಕಲಂ 14 – ಬಲಾತ್ಕಾರ
ಸಿ) ಕಲಂ 15 – ಅನುಚಿತ ಪ್ರಭಾವ
ಡಿ) ಕಲಂ 16 – ಮೋಸ

64 When sole plaintiff in a suit dies, to make them as parties to the said suit, his legal representatives have to file application under ___________ of the Code of Civil Procedure, 1908.
A) Section 47
B) Order 22 Rule 4
C) Order 22 Rule 3
D) Section 148

ಒಂದು ದಾವೆಯಲ್ಲಿನ ಏಕೈಕ ವಾದಿಯು ಮೃತಪಟ್ಟಲ್ಲಿ ಆತನ ಕಾನೂನುಬದ್ಧ ವಾರಸುದಾರರು ಅವರನ್ನು ಆ ದಾವೆಗೆ ಪಕ್ಷಗಾರರನ್ನಾಗಿ ಮಾಡಲು ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ________ರ ಅಡಿಯಲ್ಲಿ ಅರ್ಜಿ ಸಲ್ಲಿಸಬೇಕು.
ಎ) ಕಲಂ 47
ಬಿ) ಕ್ರಮಾದೇಶ 22 ನಿಯಮ 4
ಸಿ) ಕ್ರಮಾದೇಶ 22 ನಿಯಮ 3
ಡಿ) ಕಲಂ 148

65 Maximum term of imprisonment, which may be passed by the Judicial Magistrate of First class, as a sentence, is:
A) term not exceeding seven years.
B) term not exceeding five years.
C) term not exceeding three years.
D) any term

ಪ್ರಥಮ ದರ್ಜೆ ನ್ಯಾಯಾಂಗ ದಂಡಾಧಿಕಾರಿಯವರು ದಂಡಾದೇಶವಾಗಿ ವಿಧಿಸಬಹುದಾದಂತ ಕಾರಾವಾಸದ ಗರಿಷ್ಠ ಅವಧಿ:
ಎ) ಏಳು ವರ್ಷಗಳಿಗೆ ಮೀರದ ಅವಧಿ
ಬಿ) ಐದು ವರ್ಷಗಳಿಗೆ ಮೀರದ ಅವಧಿ
ಸಿ) ಮೂರು ವರ್ಷಗಳಿಗೆ ಮೀರದ ಅವಧಿ
ಡಿ) ಯಾವುದೇ ಅವಧಿ

66 A dumb witness gives evidence by writing in the open court. Such evidence shall be deemed to be______
A) Oral evidence.
B) documentary evidence.
C) written evidence.
D) Any one of the above

ಓರ್ವ ಮೂಕ ಸಾಕ್ಷಿಯು ತೆರೆದ ನ್ಯಾಯಾಲಯದಲ್ಲಿ ಬರವಣಿಗೆ ರೂಪದಲ್ಲಿ ಸಾಕ್ಷಿಯನ್ನು ನೀಡುತ್ತಾನೆ. ಅಂತಹ ಸಾಕ್ಷ್ಯವನ್ನು ________ ಎಂದು ಭಾವಿಸತಕ್ಕದ್ದು.
ಎ) ಮೌಖಿಕ ಸಾಕ್ಷ್ಯ
ಬಿ) ದಾಖಲಾತಿ ಸಾಕ್ಷ್ಯ
ಸಿ) ಬರಹ ಸಾಕ್ಷ್ಯ
ಡಿ) ಮೇಲಿನ ಯಾವುದಾದರೊಂದು

67 Section 114 of the Code of Civil Procedure, 1908 should be read with :
A) Order XLVII Rule 1
B) Order XLVI Rule 1
C) Order XLVIII Rule 1
D) Order XLV Rule 1

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 114ನ್ನು __________ರೊಂದಿಗೆ ಓದತಕ್ಕದ್ದು
ಎ) ಕ್ರಮಾದೇಶ 47 ನಿಯಮ 1
ಬಿ) ಕ್ರಮಾದೇಶ 46 ನಿಯಮ 1

ಸಿ) ಕ್ರಮಾದೇಶ 48 ನಿಯಮ 1
ಡಿ) ಕ್ರಮಾದೇಶ 45 ನಿಯಮ 1

68 As per Order XVIII Rule 3 of Code of Civil Procedure, 1908, in a suit where the party beginning to lead evidence, has right to reserve the production of rebuttal evidence, ____________
A) on all the issues.
B) only on those issues burden of proving the same lies on him.
C) only on those issues burden of proving the same lies on the other party.
D) No right to reserve

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 18 ನಿಯಮ 3ರ ಪ್ರಕಾರ ಒಂದು ದಾವೆಯಲ್ಲಿ ಸಾಕ್ಷ್ಯವನ್ನು ಹಾಜರು ಪಡಿಸಲು ಪ್ರಾರಂಭಿಸುವ ಪಕ್ಷಕಾರನಿಗೆ ________ ನಿರಾಕರಣ ಸಾಕ್ಷ್ಯವನ್ನು ಕಾಯ್ದಿರಿಸುವ ಹಕ್ಕು ಇರುತ್ತದೆ:
ಎ) ಎಲ್ಲಾ ವಿವಾದಾಂಶಗಳ ಮೇಲೆ
ಬಿ) ತಾನು ರುಜುವಾತು ಪಡಿಸಬೇಕಾಗಿರುವ ವಿವಾದಾಂಶಗಳ ಮೇಲೆ ಮಾತ್ರ
ಸಿ) ಇತರ ಪಕ್ಷಕಾರನು ರುಜುವಾತು ಪಡಿಸಬೇಕಾಗಿರುವ ವಿವಾದಾಂಶಗಳ ಮೇಲೆ ಮಾತ್ರ
ಡಿ) ಕಾಯ್ದಿರಿಸುವ ಹಕ್ಕು ಇರುವುದಿಲ್ಲ

69 One of the following relief can be granted under the Specific Relief Act, 1963:
A) Recovery of Money.
B) Ejectment of tenant.
C) Redumption of mortgage.
D) Perpetual Injunction

ನಿರ್ದಿಷ್ಟ ಪರಿಹಾರ ಅಧಿನಿಯಮ 1963ರ ಅಡಿಯಲ್ಲಿ ಈ ಕೆಳಗಿನ ಪೈಕಿ ಒಂದು ಪರಿಹಾರವನ್ನು ಮಂಜೂರು ಮಾಡಬಹುದು:
ಎ) ಹಣ ವಸೂಲಾತಿ.
ಬಿ) ಬಾಡಿಗೆದಾರನನ್ನು ಖಿಲ್ಲಾಗೊಳಿಸುವುದು.
ಸಿ) ಭೋಗ್ಯವನ್ನು ವಿಮೋಚನೆ ಮಾಡುವುದು.
ಡಿ) ಶಾಶ್ವತ ನಿರ್ಬಂದಕಾಜ್ಞೆ.

70 Sec.216 of the Code of Criminal Procedure, 1973 deals with the following subject:
A) alteration of charge.
B) effects of errors in framing charge.
C) contents of charge.
D) Recall of witness when charge is altered.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 216 ಈ ಕೆಳಗಿನ ವಿಷಯವನ್ನು ವ್ಯವಹರಿಸುತ್ತದೆ:
ಎ) ದೋಷಾರೋಪಣೆಯ ತಿದ್ದುಪಡಿ
ಬಿ) ದೋಷಾರೋಪಣೆಯಲ್ಲಿ ಆದ ತಪ್ಪುಗಳ ಪರಿಣಾಮ

ಸಿ) ದೋಷಾರೋಪಣೆಯಲ್ಲಿನ ಒಳಾಂಶಗಳು
ಡಿ) ದೋಷಾರೋಪಣೆ ತಿದ್ದುಪಡಿಯಾದಾಗ ಸಾಕ್ಷಿಗಳನ್ನು ಪುನಃ ಕರೆಯುವುದು

71 A voluntarily throws into a river a ring belonging to B with an intention thereby causing wrongful loss to B. A has committed ____________
A) Mischief
B) Theft
C) Extortion
D) No offence.

ಎ ಯು ಬಿ ಗೆ ಅಕ್ರಮ ನಷ್ಟ ಉಂಟು ಮಾಡಬೇಕೆಂಬ ಉದ್ದೇಶದಿಂದ ಅವನಿಗೆ ಸೇರಿದ ಉಂಗುರವನ್ನು ಸ್ವಯಿಚ್ಛೆಯಿಂದ ನದಿಗೆ ಎಸೆಯುತ್ತಾನೆ. ಎ ಯು ________ ಮಾಡಿರುತ್ತಾನೆ.
ಎ) ಕೇಡು
ಬಿ) ಕಳವು
ಸಿ) ಬಲ್ಾಗ್ರಹಣ
ಡಿ) ಯಾವುದೇ ಅಪರಾಧ ಇಲ್ಲ

72 Which one of the following is not correctly matched according to the Code of Civil Procedure, 1908?
A) Order 26 Rule 9 – Commissions to make local investigations.
B) Order 1 Rule 10(2) – Adding or striking out parties.
C) Order 7 Rule 11 – Rejection of plaint.
D) Order 9 Rule 9- Set aside the exparte decree.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಪ್ರಕಾರ ಈ ಕೆಳಗಿನ ಪೈಕಿ ಯಾವುದೊಂದು ಸರಿಯಾದ ಹೊಂದಾಣಿಕೆಯಾಗಿರುವುದಿಲ್ಲ?
ಎ) ಕ್ರಮಾದೇಶ 26 ನಿಯಮ 9 – ಸ್ಥಳೀಯ ತನಿಖೆ ಮಾಡಲು ಆಯುಕ್ತರು
ಬಿ) ಕ್ರಮಾದೇಶ 1 ನಿಯಮ 10(2) – ಪಕ್ಷಕಾರರನ್ನು ಸೇರಿಸುವುದು ಅಥವಾ ತೆಗೆದುಹಾಕುವುದು
ಸಿ) ಕ್ರಮಾದೇಶ 7 ನಿಯಮ 11 – ವಾದಪತ್ರವನ್ನು ತಿರಸ್ಕರಿಸುವುದು
ಡಿ) ಕ್ರಮಾದೇಶ 9 ನಿಯಮ 9 – ಏಕಪಕ್ಷೀಯ ಡಿಕ್ರಿಯನ್ನು ರದ್ದುಪಡಿಸುವುದು

73 In a suit for mandatory injunction, if the relief for damages is not claimed, the court can allow the plaintiff to amend the plaint to include a claim for the said relief__________
A) Only before filing the written statement.
B) Only before commencement of trial.
C) At any stage of the proceedings
D) Can not be allowed to amend the plaint.

ಆಜ್ಞಾಪಕ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿದ ದಾವೆಯಲ್ಲಿ ನಷ್ಟ ಭರ್ತಿಯ ಪರಿಹಾರವನ್ನು ಕೇಳದೇ ಇದ್ದಾಗ ಅಂತಹ ಪರಿಹಾರವನ್ನು ಸೇರಿಸಿ ವಾದಿಗೆ ವಾದಪತ್ರ ತಿದ್ದುಪಡಿ ಮಾಡಲು ನ್ಯಾಯಾಲಯವು ಅವಕಾಶ ಕೊಡಲು ಆಗುವುದು__________
ಎ) ಪ್ರತಿವಾದ ಪತ್ರ ಸಲ್ಲಿಸುವ ಮೊದಲು ಮಾತ್ರ
ಬಿ) ಸಾಕ್ಷಿ ವಿಚಾರಣೆ ಪ್ರಾರಂಭವಾಗುವ ಮೊದಲು ಮಾತ್ರ

ಸಿ) ಪ್ರಕರಣದ ಯಾವುದೇ ಹಂತದಲ್ಲಿ
ಡಿ) ವಾದಪತ್ರವನ್ನು ತಿದ್ದುಪಡಿ ಮಾಡಲು ಅವಕಾಶ ಕೊಡಲಾಗುವುದಿಲ್ಲ

74 As per Section 122 of the Transfer of Property Act, 1882, if the donee dies before the acceptance of the gift, said gift is___
A) Valid.
B) Illegal
C) Voidable.
D) Void

ಸ್ವತ್ತು ವರ್ಗಾವಣೆ ಅಧಿನಿಯಮ, 1882ರ ಕಲಂ 122ರ ಪ್ರಕಾರ ದಾನವು ಅಂಗೀಕಾರವಾಗುವ ಮೊದಲು ದಾನ ಪಡೆಯುವವರು ಮೃತಪಟ್ಟಲ್ಲಿ, ಆ ದಾನವು ___________
ಎ) ಕಾನೂನುಬದ್ಧವಾಗಿರುತ್ತದೆ
ಬಿ) ಕಾನೂನು ಬಾಹಿರವಾಗುತ್ತದೆ
ಸಿ) ಶೂನ್ಯಗೊಳಿಸಬಹುದಾಗುತ್ತದೆ
ಡಿ) ಶೂನ್ಯವಾಗುತ್ತದೆ

75 A gift comprising both existing and future property is:
A) Valid
B) Void.
C) Voidable
D) Void as to the latter

ಅಸ್ತಿತ್ವದಲ್ಲಿರುವ ಮತ್ತು ಭಾವಿ ಸ್ವತ್ತುಗಳೆರಡನ್ನು ಒಳಗೊಂಡಿರುವ ದಾನವು:
ಎ) ಕಾನೂನಬದ್ಧ
ಬಿ) ಶೂನ್ಯ
ಸಿ) ಶೂನ್ಯಗೊಳಿಸಬಹುದಾದ
ಡಿ) ಎರಡನೆಯದಕ್ಕೆ ಸಂಬಂಧಿಸಿದಂತೆ ಶೂನ್ಯ

76 As per Section 147 of the Negotiable Instruments Act, 1881, every offence punishable under the said Act is _________
A) compoundable.
B) non compoundable
C) compoundable with the permission of the Court.
D) None of the above.

ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ ಕಲಂ 147ರ ಪ್ರಕಾರ ಆ ಅಧಿನಿಯಮದ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಎಲ್ಲಾ ಅಪರಾಧಗಳು ___________ ಪ್ರಕರಣಗಳಾಗಿರುತ್ತವೆ.
ಎ) ರಾಜಿ ಮಾಡಬಹುದಾದ.
ಬಿ) ರಾಜಿ ಮಾಡಲು ಆಗದೆ ಇರುವ.
ಸಿ) ನ್ಯಾಯಾಲಯದಿಂದ ಪರವಾನಿಗೆ ಪಡೆದು ರಾಜಿ ಮಾಡಬಹುದಾದ.
ಡಿ) ಮೇಲಿನ ಯಾವುದೂ ಅಲ್ಲ

77 The claim that one was elsewhere when an alleged act took place is called as _______
A) res gestae.
B) alibi.
C) estoppel.
D) none of the above.

ಆರೋಪಿಸಿದ ಕೃತ್ಯ ನಡೆದ ಕಾಲಕ್ಕೆ ತಾನು ಬೇರೊಂದು ಸ್ಥಳದಲ್ಲಿ ಇದ್ದೆನು ಎನ್ನುವ ಸಾಧನೆಯನ್ನು _________ ಎಂದು ಕರೆಯುತ್ತಾರೆ.
ಎ) ರೆಸ್ ಗೆಸ್ಟೆ
ಬಿ) ಅಲಿಬಿ
ಸಿ) ಎಸ್ಟಾಪಲ್
ಡಿ) ಮೇಲಿನ ಯಾವುದು ಅಲ್ಲ

78 Mithakshara is a commentary on _________:
A) Narada Smrithi
B) Manu Smrithi
C) Yajnavalkya Smrithi
D) Parashara Smrithi

ಮಿತಾಕ್ಷರವು _________ ಮೇಲಿನ ವ್ಯಾಖ್ಯಾನವಾಗಿದೆ:
ಎ) ನಾರದ ಸ್ಮೃತಿ
ಬಿ) ಮನು ಸ್ಮೃತಿ
ಸಿ) ಯಾಜ್ಞವಲ್ಕ್ಯ ಸ್ಮೃತಿ
ಡಿ) ಪರಾಷರ ಸ್ಮೃತಿ

79 Which Section of the Negotiable Instruments Act, 1881 deals with effect of material alteration of the Negotiable Instruments?
A) Sec.85
B) Sec.86
C) Sec.87
D) Sec.88

ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ ಯಾವ ಕಲಂ ವರ್ಗಾವಣೀಯ ಲಿಖಿತಗಳ ಪ್ರಮುಖ ಬದಲಾವಣೆಯ ಪರಿಣಾಮಗಳ ಬಗ್ಗೆ ವ್ಯವಹರಿಸುತ್ತದೆ?
ಎ) ಕಲಂ 85
ಬಿ) ಕಲಂ 86
ಸಿ) ಕಲಂ 87
ಡಿ) ಕಲಂ 88

80 Which Indian City is called as Orange City?
A) Nagpur.
B) Hydarbad.
C) Jaipur.
D) Gwaliar.

ಭಾರತದ ಯಾವ ನಗರವನ್ನು ಕಿತ್ತಳೆ ನಗರ ಎಂದು ಕರೆಯುತ್ತಾರೆ?
ಎ) ನಾಗಪುರ.
ಬಿ) ಹೈದರಬಾದ್.
ಸಿ) ಜೈಪುರ.
ಡಿ) ಗ್ವಾಲಿಯರ್.

81 A proposal, when accepted, becomes __________
A) a contract.
B) an agreement.
C) a promise.
D) None of the above.

ಯಾವುದೇ ಪ್ರಸ್ತಾಪವು ಸ್ವೀಕೃತವಾದಾಗ, ಅದು ______________ ಆಗುತ್ತದೆ.
ಎ) ಕರಾರು.
ಬಿ) ಒಪ್ಪಂದ.
ಸಿ) ವಾಗ್ದಾನ.
ಡಿ) ಮೇಲಿನ ಯಾವುದೂ ಅಲ್ಲ.

82 Which one of the following is correct combination regarding country and its capital?
A) Australia- Sydney.
B) Pakistan- Karachi.
C) Japan- Tokyo.
D) United States of America- Newyork.

ದೇಶ ಮತ್ತು ರಾಜಧಾನಿಗೆ ಸಂಬಂಧಿಸಿದಂತೆ ಈ ಕೆಳಗಿನ ಪೈಕಿ ಯಾವುದು ಒಂದು ಸರಿಯಾದ ಹೊಂದಾಣಿಕೆ?
ಎ) ಆಸ್ಟ್ರೇಲಿಯ – ಸಿಡ್ನಿ
ಬಿ) ಪಾಕಿಸ್ತಾನ – ಕರಾಚಿ
ಸಿ) ಜಪಾನ್ – ಟೋಕಿಯೊ
ಡಿ) ಸಂಯುಕ್ತ ರಾಜ್ಯಗಳ ಅಮೇರಿಕ – ನ್ಯೂಯಾರ್ಕ್

83 As per Section 161 (2) of the Code Criminal Procedure, 1973, a person is not bound to answer any question put to him by the police officer making an investigation, if answer to the said question would have tendency to ____________
A) expose him to a criminal charge.
B) expose him to a penalty.
C) expose him to forfeiture.
D) All the above.

ಅಪರಾಧ ಪ್ರಕ್ರಿಯಾ ಸಂಹಿತೆ, 1973 ಕಲಂ 161(2)ರ ಪ್ರಕಾರ ತನಿಖೆ ನಡೆಸುತ್ತಿರುವ ಪೋಲೀಸ್ ಅಧಿಕಾರಿಯು ಯಾವನೇ ವ್ಯಕ್ತಿಗೆ ಕೇಳಿದ ಪ್ರಶ್ನೆಗೆ ಕೊಡಬೇಕಾಗಿರುವ ಉತ್ತರವು, ________ ಆ ಪ್ರಶ್ನೆಗೆ ಉತ್ತರವನ್ನು ಕೊಡಲು ಆತ ಬಾಧ್ಯಸ್ಥನಲ್ಲ.
ಎ) ಆತನನ್ನು ಅಪರಾಧಿಕ ಆಪಾದನೆಗೆ ಒಳಪಡಿಸುತಿದ್ದಲ್ಲಿ
ಬಿ) ಆತನನ್ನು ದಂಡಕ್ಕೆ ಒಳಪಡಿಸುತಿದ್ದಲ್ಲಿ

ಸಿ) ಆತನನ್ನು ಮುಟ್ಟುಗೋಲಿಗೆ ಒಳಪಡಿಸುತಿದ್ದಲ್ಲಿ
ಡಿ) ಮೇಲಿನ ಎಲ್ಲವೂ

84 Which one of the following is incorrect combination as per the Specific Relief Act, 1963?
A) Sec.27- Rescession of contracts.
B) Sec.30- cancellation of Instruments.
C) Sec.34- Declaration of status or right
D) Sec.39- Mandatory Injunction.

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ ಪ್ರಕಾರ ಈ ಕೆಳಗಿನ ಪೈಕಿ ಯಾವುದೊಂದು ಸರಿಯಾದ ಹೊಂದಾಣಿಕೆ ಆಗಿರುವುದಿಲ್ಲ?
ಎ) ಕಲಂ 27 – ಕರಾರುಗಳ ರದ್ದಿಯಾತಿ
ಬಿ) ಕಲಂ 30 – ಲಿಖಿತಗಳ ರದ್ದಿಯಾತಿ
ಸಿ) ಕಲಂ 34 – ಸ್ಥಾನಮಾನ ಅಥವಾ ಹಕ್ಕಿನ ಘೋಷಣೆ
ಡಿ) ಕಲಂ 39 – ಆಜ್ಞಾಪಕ ನಿರ್ಭಂದಕಾಜ್ಞೆ

85 "Obligation" as defined under Section 2(a) of the Specific Relief Act, 1963 includes every__________enforceable by law.
A) duty.
B) right.
C) obligation.
D) legal right.

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ ಕಲಂ 2(ಎ)ದಲ್ಲಿ ವ್ಯಾಖ್ಯಾನಿಸಿದ "ಹೊಣೆಗಾರಿಕೆ" ಕಾನೂನು ಮೂಲಕ ಜಾರಿಗೊಳಿಸಬಹುದಾದ ಪ್ರತಿಯೊಂದು ________ ಒಳಗೊಳ್ಳುತ್ತದೆ.
ಎ) ಕರ್ತವ್ಯ
ಬಿ) ಹಕ್ಕು
ಸಿ) ಹೊಣೆಗಾರಿಕೆ
ಡಿ) ಕಾನೂನುಬದ್ಧ ಹಕ್ಕು

86 When a suit, in which defendant raised counter claim, is dismissed for default of plaintiff:
A) Counter claim also stands dismissed.
B) Counter claim may be proceeded with.
C) Counter claim is to be returned for its re-presentation as separate suit.
D) Counter claim may be proceeded only when suit is restored

ಪ್ರತಿವಾದಿಯು ವಜಾವಟ್ಟು ಕೇಳಿಕೊಂಡಿದ್ದ ದಾವೆಯು, ವಾದಿಯ ತಪ್ಪಿತಕ್ಕಾಗಿ ವಜಾಗೊಂಡಲ್ಲಿ:
ಎ) ವಜಾವಟ್ಟು ಕೂಡ ವಜಾಗೊಳ್ಳುತ್ತದೆ
ಬಿ) ವಜಾವಟ್ಟನ್ನು ಮುಂದುವರಿಸಬಹುದು
ಸಿ) ವಜಾವಟ್ಟನ್ನು ಪ್ರತ್ಯೇಕ ದಾವೆಯಾಗಿ ಪುನರ್ ಸಲ್ಲಿಸಲು ವಾಪಸ್ಸು ಕೊಡಬೇಕು
ಡಿ) ದಾವಾವನ್ನು ಪುನಃ ವಿಚಾರಣೆಗೆ ತೆಗೆದುಕೊಂಡಾಗ ಮಾತ್ರ ವಜಾವಟ್ಟನ್ನು ಮುಂದುವರಿಸಬಹುದು

87 Who is the captain of Indian Womens Hockey team, which reached the semifinal of the recently held Tokyo Olympics 2020?

A) Rani Rampal.
B) Vandana Katariya.
C) Navneet Kaur.
D) Sunita Lakra.

ಇತ್ತೀಚೆಗೆ ನಡೆದ ಟೋಕಿಯೊ ಒಲಿಂಪಿಕ್ಸ್ 2020ರಲ್ಲಿ ಉಪಾಂತ್ಯಕ್ಕೆ ತಲುಪಿದ ಭಾರತೀಯ ಮಹಿಳೆಯರ ಹಾಕಿ ತಂಡದ ನಾಯಕಿ ಯಾರು?

ಎ) ರಾಣಿ ರಾಂಪಾಲ್
ಬಿ) ವಂದನಾ ಕಟಾರಿಯ
ಸಿ) ನವನೀತ್ ಕೌರ್
ಡಿ) ಸುನೀತ ಲಕ್ರ

88 Which Section of the Negotiable Instruments Act, 1881 states that the evidence of the complainant may be given by him on affidavit?

A) Sec.145.
B) Sec.146.
C) Sec.147.
D) Sec.148.

ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ ಯಾವ ಕಲಂ ಫಿರ್ಯಾದಿಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮುಖಾಂತರ ನೀಡಬಹುದು ಎಂದು ತಿಳಿಸುತ್ತದೆ?

ಎ) ಕಲಂ 145
ಬಿ) ಕಲಂ 146
ಸಿ) ಕಲಂ 147
ಡಿ) ಕಲಂ 148

89 Which provision of the Code of Civil Procedure, 1908 says that, where a suit is instituted against a public officer for damages or other relief in respect of any act alleged to have been done by him in his official capacity, the Government shall be joined as a party to the suit?

A) Order 1 Rule 10 (2).
B) Order XXVII Rule 5A.
C) Section 80.
D) No such provision.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಯಾವ ನಿಬಂಧನೆಯು ಸಾರ್ವಜನಿಕ ಅಧಿಕಾರಿಯು ತನ್ನ ಪದೀಯ ಬಲದಲ್ಲಿ ಮಾಡಿದ್ದಾನೆಂದು ಹೇಳಲಾದ ಯಾವುದೇ ಕಾರ್ಯದ ಸಂಬಂಧದಲ್ಲಿ ಆತನ ವಿರುದ್ಧ ಹಾನಿ ಪರಿಹಾರಕ್ಕಾಗಿ ಅಥವಾ ಇತರ ಯಾವುದೇ ಪರಿಹಾರಕ್ಕಾಗಿ ದಾವೆಯನ್ನು ಹೂಡಿದಾಗ ಸರಕಾರವನ್ನು ಆ ದಾವೆಯ ಪಕ್ಷಕಾರನನ್ನಾಗಿ ಸೇರಿಸತಕ್ಕದ್ದು ಎಂದು ತಿಳಿಸುತ್ತದೆ?

ಎ) ಕ್ರಮಾದೇಶ 1 ನಿಯಮ 10(2)
ಬಿ) ಕ್ರಮಾದೇಶ 27 ನಿಯಮ 5ಎ
ಸಿ) ಕಲಂ 80
ಡಿ) ಅಂತಹ ಯಾವುದೇ ನಿಬಂಧನೆಗಳಿಲ್ಲ

90 Where an immovable property is sold in execution of a decree, the sale of such property becomes absolute_____
A) when the court makes an order confirming the sale.
B) when the possession of the property sold is delivered to the purchaser.
C) when document conveying title (Sale Deed) to such property is executed.
D) on completion of 60 days after the execution of the Sale Deed.

ಡಿಕ್ರಿಯ ಅಮಲ್ಜಾರಿಗಾಗಿ ಸ್ಥಿರಾಸ್ತಿಯನ್ನು ಮಾರಾಟ ಮಾಡಿದಾಗ ಆ ಆಸ್ತಿಯ ಮಾರಾಟ ಪಕ್ಕವಾಗುವುದು ___________
ಎ) ನ್ಯಾಯಾಲಯವು ಆ ಮಾರಾಟವನ್ನು ಸ್ಥಿರಿಕರಿಸುವ ಆದೇಶವನ್ನು ಮಾಡಿದಾಗ.
ಬಿ) ಮಾರಾಟ ಮಾಡಿದ ಆಸ್ತಿಯ ಸ್ವಾಧೀನವನ್ನು ಖರೀದಿದಾರನಿಗೆ ವರ್ಗಾವಣೆ ಮಾಡಿದಾಗ.
ಸಿ) ಆ ಆಸ್ತಿಯ ಮಾಲೀಕತ್ವವನ್ನು ವರ್ಗಾವಣೆ ಮಾಡಿದ ಬಗ್ಗೆ ದಾಖಲೆ (ಖರೀದಿ ಪತ್ರ)ವನ್ನು ಬರೆದುಕೊಟ್ಟಾಗ.
ಡಿ) ಖರೀದಿ ಪತ್ರ ಬರೆದುಕೊಟ್ಟ 60 ದಿನಗಳ ತರುವಾಯ.

91 Leading questions may be asked in ________
A) chief examination.
B) cross-examination.
C) re-examination.
D) all the above.

ಉತ್ತರ ಸೂಚಕ ಪ್ರಶ್ನೆಗಳನ್ನು ___________ ಕೇಳಬಹುದು:
ಎ) ಮುಖ್ಯ ವಿಚಾರಣೆಯಲ್ಲಿ.
ಬಿ) ಪಾಟೀ ಸವಾಲಿನಲ್ಲಿ.
ಸಿ) ಮರು–ಸವಾಲಿನಲ್ಲಿ.
ಡಿ) ಮೇಲಿನ ಎಲ್ಲವೂ.

92 Which Section of the Indian Contract Act 1872 says that every agreement in restraint of the marriage of any person, other than a minor, is void?
A) Sec.29.
B) Sec.28.
C) Sec.27.
D) Sec.26.

ಭಾರತ ಕರಾರು ಅಧಿನಿಯಮ 1872ರ ಯಾವ ಕಲಂ ಅಪ್ರಾಪ್ತ ವಯಸ್ಕನಲ್ಲದ ಯಾವುದೇ ವ್ಯಕ್ತಿಯ ವಿವಾಹವನ್ನು ಪ್ರತಿಬಂಧಿಸುವ ಪ್ರತಿಯೊಂದು ಒಪ್ಪಂದವು ಶೂನ್ಯವಾಗಿರುತ್ತದೆ ಎಂದು ತಿಳಿಸುತ್ತದೆ?
ಎ) ಕಲಂ 29.
ಬಿ) ಕಲಂ 28.
ಸಿ) ಕಲಂ 27.
ಡಿ) ಕಲಂ 26.

93 Meaning of legal maxim "nemo dat quod non habet" is:
A) Nobody is above law.
B) No one should be condomned unheard.
C) No one gives what he does not have.
D) No man shall be a judge in his own cause.

"ನೇಮೊ ಡಾಟ್ ಕ್ಯೂಡ್ ನಾನ್ ಹಬೇಟ್" ಎಂಬ ಕಾನೂನು ಸೂತ್ರದ ಅರ್ಥ:
ಎ) ಯಾರೊಬ್ಬರು ಕಾನೂನಿಗೆ ಮೀರಿಲ್ಲ
ಬಿ) ಯಾರೊಬ್ಬರನ್ನು ವಿಚಾರಿಸದೆ ಶಿಕ್ಷಿಸಬಾರದು
ಸಿ) ಯಾರೊಬ್ಬರು ತಮ್ಮ ಬಳಿ ಇಲ್ಲದೆ ಇರುವುದನ್ನು ಕೊಡಲು ಆಗುವುದಿಲ್ಲ
ಡಿ) ಯಾರೊಬ್ಬರು ಕೂಡ ತಮ್ಮದೇ ಪ್ರಕರಣದಲ್ಲಿ ತೀರ್ಪುಗಾರರಾಗಕೂಡದು

94 Ossification test is conducted ____________:
A) to determine sex of a person.
B) to determine age of a person.
C) to determine blood group of a person.
D) to determine mental status of person

ಓಸಿಫಿಕೇಷನ್ ಪರೀಕ್ಷೆಯನ್ನು __________ ನಡೆಸಲಾಗುತ್ತದೆ:
ಎ) ಓರ್ವ ವ್ಯಕ್ತಿಯ ಲಿಂಗ ಪರೀಕ್ಷೆಗಾಗಿ
ಬಿ) ಓರ್ವ ವ್ಯಕ್ತಿಯ ವಯಸ್ಸಿನ ಪರೀಕ್ಷೆಗಾಗಿ
ಸಿ) ಓರ್ವ ವ್ಯಕ್ತಿಯ ರಕ್ತದ ಗುಂಪಿನ ಪರೀಕ್ಷೆಗಾಗಿ
ಡಿ) ಓರ್ವ ವ್ಯಕ್ತಿಯ ಮಾನಸಿಕ ದೃಢತೆಯ ಪರೀಕ್ಷೆಗಾಗಿ

95 Who is the present Law minister in the Union Cabinet?
A) Smt. Nirmala Seetharaman.
B) Sri Kiren Rijiju.
C) Sri Ravi Shankar Prasad.
D) None of the Above.

ಕೇಂದ್ರ ಸಚಿವ ಸಂಪುಟದಲ್ಲಿ ಈಗಿನ ಕಾನೂನು ಸಚಿವರು ಯಾರು?
ಎ) ಶ್ರೀಮತಿ ನಿರ್ಮಲ ಸೀತರಾಮನ್
ಬಿ) ಶ್ರೀ ಕಿರೆಣ್ ರಿಜ್ಜು
ಸಿ) ಶ್ರೀ ರವಿ ಶಂಕರ್ ಪ್ರಸಾದ್
ಡಿ) ಮೇಲಿನವರು ಯಾರು ಅಲ್ಲ

96 A witness, who is interested in success of the party, who called him as a witness, is called as ______________.
A) Hostile witness.
B) Natural Witness.
C) Expert witness.
D) Interested witness.

ತನ್ನನ್ನು ಸಾಕ್ಷಿಯಾಗಿ ಕರೆದಂತಹ ಪಕ್ಷಗಾರನ ಯಶಸ್ಸಿನ ಬಗ್ಗೆ ಆಸಕ್ತಿಯುಳ್ಳ ಸಾಕ್ಷಿಯನ್ನು __________ ಎಂದು ಕರೆಯುತ್ತಾರೆ.
ಎ) ಪ್ರತಿಕೂಲ ಸಾಕ್ಷಿ.
ಬಿ) ಸ್ವಾಭಾವಿಕ ಸಾಕ್ಷಿ.
ಸಿ) ತಜ್ಞ ಸಾಕ್ಷಿ.
ಡಿ) ಆಸಕ್ತಿಯುಳ್ಳ ಸಾಕ್ಷಿ.

97 The presumption under Sec.118 of the Negotiable Instruments Act, 1881 shall be made in respect of:
A) consideration.
B) date.
C) time of acceptance.
D) All the above.

ಪರ್ಕಾವಣೀಯ ಲಿಖಿತಗಳ ಅಧಿನಿಯಮ, 1881ರ ಕಲಂ 118ರ ಅಡಿಯಲ್ಲಿ ಈ ಕೆಳಗಿನವುಗಳ ಬಗ್ಗೆ ಪೂರ್ವಭಾವನೆಯನ್ನು ಹೊಂದಬೇಕು:
ಎ) ಮೊತ್ತ.
ಬಿ) ದಿನಾಂಕ.
ಸಿ) ಸ್ವೀಕರಿಸಿದ ಸಮಯ.
ಡಿ) ಮೇಲಿನ ಎಲ್ಲವೂ.

98 Minimum number of persons required for committing an act of criminal conspiracy, an offence punishable under Sec.120B of the Indian Penal Code, are:
A) Seven.
B) five.
C) three
D) two.

ಭಾರತೀಯ ದಂಡ ಸಂಹಿತೆಯ ಕಲಂ 120ಬಿ ಯಲ್ಲಿ ದಂಡನೀಯವಾಗಿರುವ ಅಪರಾಧಿಕ ಒಳಸಂಚಿನ ಕೃತ್ಯವನ್ನು ನಡೆಸಲು ಅಗತ್ಯ ಇರುವ ಕನಿಷ್ಠ ವ್ಯಕ್ತಿಗಳ ಸಂಖ್ಯೆ:
ಎ) ಏಳು
ಬಿ) ಐದು
ಸಿ) ಮೂರು
ಡಿ) ಎರಡು

99 In which one of the following landmark decision, Supreme Court of India declared that the fundamental rights granted under the Constitution of India are equally applicable to transgender people?
A) Shreya Singhal vs Union of India.
B) National Legal Services Authority vs Union of India.
C) Lily Thomas vs Union of India.
D) Naz Foundation vs Govt of Delhi.

ಭಾರತದ ಸರ್ವೋಚ್ಚ ನ್ಯಾಯಾಲಯದ ಈ ಕೆಳಗಿನ ಯಾವ ಒಂದು ಮಹತ್ವದ ತೀರ್ಪಿನಲ್ಲಿ ಭಾರತ ಸಂವಿಧಾನದ ಅಡಿಯಲ್ಲಿ ಮಂಜೂರಾದ ಮೂಲಭೂತ ಹಕ್ಕುಗಳು ಮಂಗಳಮುಖಿ ಸಮುದಾಯದವರಿಗೆ ಸಮಾನವಾಗಿ ಅನ್ವಯವಾಗುತ್ತದೆ ಎಂದು ಘೋಷಿಸಲಾಗಿತ್ತು.
ಎ) ಶ್ರೇಯ ಸಿಂಘಾಲ್ ವಿರುದ್ಧ ಯೂನಿಯನ ಆಫ್ ಇಂಡಿಯ
ಬಿ) ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ವಿರುದ್ಧ ಯೂನಿಯನ್ ಆಫ್ ಇಂಡಿಯ
ಸಿ) ಲಿಲ್ಲಿ ಥಾಮಸ್ ವಿರುದ್ಧ ಯೂನಿಯನ್ ಆಫ್ ಇಂಡಿಯ
ಡಿ) ನಾಜ್ ಫೌಂಡೇಷನ್ ವಿರುದ್ಧ ದೆಹಲಿ ಸರ್ಕಾರ

100 Which Section of the Specific Relief Act, 1963 says that specific performance of a contract can not be enforced in favour of a person who failed to prove his readiness and willingness to perform his part of contract?

A) Section 13.
B) Section 14.
C) Section 15.
D) Section 16.

ನಿರ್ದಿಷ್ಟ ಪರಿಹಾರ ಅಧಿನಿಯಮ 1963ರ ಯಾವ ಕಲಂ ಕರಾರಿನಂತೆ ತನ್ನ ಪಾಲಿನ ಭಾಗವನ್ನು ಪಾಲಿಸಲು ಸದಾ ಸಿದ್ಧನು ಮತ್ತು ಇಷ್ಟವುಳ್ಳವನು ಎಂದು ಸಾಬೀತು ಪಡಿಸಲು ವಿಫಲನಾದವನ ಪರವಾಗಿ ಕರಾರಿನ ನಿರ್ದಿಷ್ಟ ಪಾಲನೆಯನ್ನು ಜಾರಿಗೊಳಿಸಲು ಆಗುವುದಿಲ್ಲ ಎಂದು ತಿಳಿಸುತ್ತದೆ?

ಎ) ಕಲಂ 13.
ಬಿ) ಕಲಂ 14.
ಸಿ) ಕಲಂ 15.
ಡಿ) ಕಲಂ 16.

------------